ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 37 ಸೆಪ್ಟೆಂಬರ್ 14, 1980 ಬೆಲೆ : 50 ಪೈಸೆ

ಪರ್ಯಾಯದತ್ತ

ಜನತಾಪಕ್ಷದ ವಿಫಲತೆಯನ್ನು ಎತ್ತಿತೋರಿಸುತ್ತ ಮತ್ತು ಆಶಾಸನೆ ಹಾಗೂ ಭರವಸೆಗಳೊಂದಿಗೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ (ಐ) ಸರಕಾರದ ಭೂಮಾಲಕ_ಬಂಡವಾಳಶಾಹಿ ನೀತಿಗಳಿಂದಾಗಿ ದೇಶದ ಜನತೆಯ ಸಮಸ್ಯೆಗಳು ಪರಿಹಾರವಾಗುವುದಂತಿರಲಿ, ಬದಲು ಇನ್ನೂ ಬೃಹದಾಕಾರವಾಗಿ ಬೆಳೆದಿವೆ. ಕೇಂದ್ರದಿಂದ ಪ್ರಾರಂಭವಾಗಿ ಕಾಂಗ್ರೆ ಸರಕಾರಗಳಿರುವ ರಾಜ್ಯಗಳಲ್ಲೆಲ್ಲಾ ಪಕ್ಷದ ಒಳಜಗಳದಿಂದ ಸರಕಾರದ ಆಡಳಿತ ವ್ಯವಸ್ಥೆಯೇ ಕುಸಿದು ಬೀಳುವಂತಾಗುತ್ತಲಿದೆ. ಅನ್ನ ಕೇಳಿದ ಜನತೆಗೆ ಲಾಠಿಗುಂಡುಗಳು ದೊರೆಯುತ್ತಿವೆ. ದೇಶದಲ್ಲಿ ಮತೀಯ ಮತ್ತು ಕೋಮು ಹಾಗೂ ಪ್ರತ್ಯೇಕತಾವಾದಿ ಚಳುವಳಿಗಳು ಬೆಳೆಯುತ್ತಿವೆ. ಸ್ವಾತಂತ್ರ್ಯ ಸಿಕ್ಕಿದ ಮೇಲೆ ರಾಷ್ಟ್ರವನ್ನಾಳಿದ ಭೂಮಾಲಕ-ಬಂಡವಾಳಶಾಹಿ ಪಕ್ಷಗಳ ವಿಫಲತೆಯು ಜನರಿಗೆ ಅರ್ಥವಾಗುತ್ತಲಿದೆ. ಆದರೆ ರಾಷ್ಟ್ರೀಯ ಮಟ್ಟದಲ್ಲಿ ಪರ್ಯಾಯವೊಂದು ಕಾಣಿಸದೆ ಜನ ಕಂಗಾಲಾಗಿದ್ದಾರೆ.

ಜನತಾ ಒಕ್ಕೂಟದ ಪ್ರಯೋಗ ವಿಫಲವಾದ ಮತ್ತು ಕಾಂಗ್ರೆಸರಕಾರದ ವಿಫಲತೆ ಹೆಚ್ಚುತ್ತಿದ್ದಂತೆಯೇ ರಾಷ್ಟ್ರದ ತಕ್ಷಣದ ಸಮಸ್ಯೆಗಳಿಗೆ ಪರಿ

ಸಂಪಾದಕೀಯ

ಹಾರ ದೊರೆಯುವುದು ಒಂದು ಎಡ ಪ್ರಜಾಪ್ರಭುತ್ವ ಬದಲಿಯಿಂದಲೇ ಸಾಧ್ಯ ಎಂಬುದು ಹೆಚ್ಚುಹೆಚ್ಚು ಜನರಿಗೆ ಅರ್ಥವಾಗುತ್ತಲಿದೆ. ಬಂಗಾಳ, ತ್ರಿಪುರಾ ಮತ್ತು ಕೇರಳದ ಅನುಭವಗಳು ಈ ದಿಸೆಯಲ್ಲಿ ದಿಕ್ಸೂಚಿಯಾಗಿವೆ. ಈ ಹಿನ್ನೆಲೆಯಲ್ಲಿ ಆರು ಪಕ್ಷಗಳು, ಅಂದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ, ಆರ್. ಎಸ್. ಪಿ., ಫಾರ್ವರ್ಡ್ ಬ್ಲಾಕ್, ಲೋಕದಳ ಮತ್ತು ಕಾಂಗ್ರೆಸ್ಸುಗಳು ಒಂದಾಗಿ ಜನರ ತುರ್ತುಸಮಸ್ಯೆಗಳ ಬಗ್ಗೆ ರಾಷ್ಟ್ರೀಯ ಮಟ್ಟದ ಹೋರಾಟ ನಡೆಸಲು ತೀರ್ಮಾನಿಸಿರುವುದು ಸ್ವಾಗತಾರ್ಹ. ಈ ಬೆಳವಣಿಗೆಯು ಬಹಳ ಆರೋಗ್ಯಕರ. ಜನತಾಪಕ್ಷವು ಇದರಿಂದ ಹೊರಗುಳಿದಿರುವುದು, ಅದಕ್ಕೆ ಈ ಆರು ಪಕ್ಷಗಳೊಂದಿಗೆ ಏಕಾಭಿಪ್ರಾಯಕ್ಕೆ ಬರಲು ಅಸಾಧ್ಯವಾದುದರಿಂದಲೇ ಆಗಿದೆ. ಜನತಾಪಕ್ಷವೂ ಈ ಆರು ಪಕ್ಷಗಳ ಕೂಟಕ್ಕೆ ಸೇರವುದೆಂದು ನಾವು ಆಶಿಸುತ್ತೇವೆ.

ಆರು ಪಕ್ಷಗಳು ಒಟ್ಟಾಗಿ ಸೇರಿದ ಮಾತ್ರಕ್ಕೆ ಇದೊಂದು ರಾಜಕೀಯ ಮೈತ್ರಿಕೂಟ ಎಂಬು ತಿಳಿಯಬಾರದು. ಜನತೆಯ ಸಮಸ್ಯೆಗಳ ಬಗ್ಗೆ ಒಂದಾಗಿ ಹೋರಾಡುವುದು, ಸರ್ವಾಧಿಕಾರ ಮತ್ತು ಜಾತೀಯ

[ಕಡೆಯ ಪುಟ ನೋಡಿ[

ಬಾಗೇಪಲ್ಲಿಯಲ್ಲಿ ಪೋಲೀಸ್ ಅತಿರೇಕ

ಮಲಪ್ರಭಾ ರೈತ ಚಳುವಳಿಗೆ ಬೆಂಬಲ ಸೂಚಿಸಿ ಮತ್ತು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಸರಕಾರವನ್ನು ಒತ್ತಾಯಿಸಲು ಕೋಲಾರ ಜಿಲ್ಲೆಯ ಬಾಗೇಪಲ್ಲಿಯಲ್ಲಿ ಎಲ್ಲಾ ವಿರೋಧ ಪಕ್ಷಗಳು ಮತ್ತು ರೈತಸಂಘಗಳು ಪ್ರತಿಭಟನಾ ಕಾರ್ಯಕ್ರಮವನ್ನು ಶಾಂತಿಯುತವಾಗಿ ನಡೆಸುತ್ತಿದ್ದಾಗ ಪೋಲೀಸ್ ಗೋಲೀಬಾರಿನಲ್ಲಿ ಇಬ್ಬರು ಸಾವನ್ನಪ್ಪಬೇಕಾಯಿತು. ಹಲವಾರು ಮಂದಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗುವಂತಾಯಿತು. ವಿನಾಕಾರಣ ಪೋಲೀಸರು ಗುಂಡು ಹಾರಿಸಿದರೆಂಬುದನ್ನು ಪ್ರತ್ಯಕ್ಷದರ್ಶಿಗಳು ಹೇಳುತ್ತಿದ್ದಾರೆ ಮಾತ್ರವಲ್ಲ ಘಟನೆ ನಡೆದ ಸ್ಥಳದಲ್ಲಿನ ಕುರುಹುಗಳು ಇದನ್ನು ಪುಷ್ಟೀಕರಿಸುತ್ತಿವೆ ಯಾರಿಂದ ಗೋಲೀಬಾರಿಗೆ ಹುಕುಂ ಬರಬೇಕಾಗಿತ್ತೋ ಅವರಿಂದ ಬಂದಿಲ್ಲವೆಂಬುದೂ ಇದೀಗ ಸ್ಪಷ್ಟವಾಗಿದೆ.

ಬಾಗೇಪಲ್ಲಿಯಲ್ಲಿ ನಡೆದನರಮೇಧಕ್ಕೆ ನೇತೃತ್ವವನ್ನು ಕೊಟ್ಟವರು ಅಲ್ಲಿಯ ದುರಹಂಕಾರಿ ಸರ್ಕಲ್ ಇನ್ಸ್‌ಪೆಕ್ಟರ್ ಪೃಥ್ವಿರಾಜ್ ಎಂಬವನೆಂಬುದು ಎಲ್ಲರೂ ತಿಳಿದಿರುವ ವಿಚಾರ. ಜೀವವನ್ನು ಬಲಿತೆಗೆದುಕೊಂಡದ್ದರಿಂದಲೇ ತೃಪ್ತರಾಗದ ಬಾಗೇಪಲ್ಲಿ ಪೋಲೀಸರು ಇದೀಗ ವಿರೋಧ ಪಕ್ಷದ ಮುಖಂಡರುಗಳನ್ನೂ, ಅನೇಕ ರೈತಕಾರ್ಯಕರ್ತರುಗಳನ್ನೂ ಹಿಂಸಿಸುತ್ತಲಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಂದಾಳು ಮತ್ತು ಜನಪ್ರಿಯ ರೈತ ಮುಖಂಡ ಕಾಂ. ಅಪ್ಪಸ್ವಾಮಿ ರೆಡ್ಡಿಯವರೂ ಸೇರಿದಂತೆ ಹತ್ತಾರು ಮಂದಿಯನ್ನು ಬಂಧಿಸಿ ಆಮೇಲೆ ಬ್ರಿಟಿಷರ ಕಾಲದಲ್ಲಿದ್ದ ಕ್ರಮಗಳನ್ನೂ ನಾಚಿಸುವಂತೆ ಹಲವಾರು ಶರತ್ತು ಮತ್ತು ಕಟ್ಟಪ್ಪಣೆಗಳ ಮೂಲಕ ಜಾಮೀನಿನಲ್ಲಿ ಬಿಡುಗಡೆ ಮಾಡಲಾಯ್ತು. ಇವರುಗಳು ದಿನಾ ಸಂಜೆ ಹೊತ್ತು ಪೋಲೀಸ್ ಠಾಣೆಗೆ ಬಂದು ಸಹಿಮಾಡಬೇಕೆಂದೂ, ಸಭೆ ವಗೈರೆಗಳಲ್ಲಿ ಭಾಗವಹಿಸಕೂಡದೆಂದೂ, ಹೊರ ಊರುಗಳಿಗೆ ಹೋಗಕೂಡದೆಂದೂ ಕಡ್ಡಾಯ ಮಾಡಲಾಗಿದೆ.

ಪೋಲೀಸರು ಹಳ್ಳಿ ಹಳ್ಳಿಗಳಿಗೆ ಹೋಗಿ ಜನರಿಗೆ ಬೆದರಿಕೆ ಹಾಕುತ್ತಾ, ಸಂಘಟನೆಯನ್ನು ಹತ್ತಿಕ್ಕಲು ಪ್ರಯತ್ನಿಸುತ್ತಲಿದ್ದಾರೆ. ಬಂಧಿತರನ್ನು ಜಾಮೀನಿನಲ್ಲಿ ಬಿಡಲು ಜಾಮೀನು ನಿಂತವರ ಮೇಲೆ ಸುಳ್ಳು ಕೇಸುಗಳನ್ನು ಹಾಕುತ್ತಲಿದ್ದಾರೆ. ಈಗಾಗಲೇ ಸುಮಾರು 400 (ನಾಲ್ಕುನೂರು) ಜನರ ಮೇಲೆ ಸೆ.395ರ ಪ್ರಕಾರ ದರೋಡೆ, ಲೂಟಿ ವಗೈರೆ ಕೇಸು ದಾಖಲುಮಾಡಿ, ಸೆಶನ್ಸ್ ಕೋರ್ಟಿಗೆ ಹಾಕುವುದರಲ್ಲಿದ್ದಾರೆ. ಬಾಗೇಪಲ್ಲಿಯಿಂದ ಇವರೆಲ್ಲಾ ಕೇಸಿಗಾಗಿ ಕೋಲಾರಕ್ಕೆ ಹೋಗುವುದೆಂದರೆ ಅಸಾಧ್ಯವಾದ ಮಾತು. ಇದರ ಬದಲು ಪೋಲೀಸ್ ಅತಿರೇಕದ ವಿರುದ್ಧ ಹೋರಾಡಲು ಇವರೆಲ್ಲಾ ತೀರ್ಮಾನಿಸಿದ್ದಾರೆ.

ಬಾಗೇಪಲ್ಲಿಯ ಹೋರಾಟದಲ್ಲಿ ಮತ್ತು ಈದಿನ ಕಾರ್ಯಕ್ರಮಗಳಲ್ಲಿ ಸಿ. ಪಿ. ಐ. (ಎಂ) ಮತ್ತದರ ರೈತ

[ಕಡೆಯ ಪುಟ ನೋಡಿ]

ರಾಜ್ಯಸರಕಾರದ ಜನವಿರೋಧಿ ಮತ್ತು ಸರ್ವಾಧಿಕಾರ ಧೋರಣೆಗಳ ವಿರುದ್ಧ

ಜಂಟಿ ಹೋರಾಟಕ್ಕೆ ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ) ಕರೆ

ದೇಶದ ಪರಿಸ್ಥಿತಿಯು ಬಹಳ ಗಂಭೀರವಾಗಿದೆ ದೇಶದ ಈಶಾನ್ಯ ಭಾಗದ ಜನತೆಯ ಅತೃಪ್ತಿಯನ್ನು ಉಪಯೋಗಿಸಿಕೊಂಡು ಸಾಮ್ರಾಜ್ಯಶಾಹಿಗಳು ಮತ್ತವರ ಸಹವರ್ತಿಗಳು ಹಾಗೂ ಪ್ರತಿಗಾಮಿ-ಕೋಮುವಾರು ಶಕ್ತಿಗಳು ಅಸ್ಸಾಂ ಸಂಯುಕ್ತ ರಾಜ್ಯಗಳ ಪ್ರತ್ಯೇಕವಾದಿ ಚಳವಳಿಗೆ ನೇರವಾಗಿ ಸಹಾಯ ಮತ್ತು ನೇತೃತ್ವ ನೀಡುತ್ತಿದ್ದಾರೆ. ಪರಿಸ್ಥಿತಿಯನ್ನು ಅಭದ್ರಗೊಳಿಸಲು ಮಾಡಲಾಗುತ್ತಿರುವ ಈ ಪ್ರಯತ್ನದಲ್ಲಿ ದುರದೃಷ್ಟವಶಾತ್ ವಿದ್ಯಾರ್ಥಿ ಯುವಜನರೂ ಸೇರಿದ್ದಾರೆ ಆದರೆ ಇದುವರೆಗೂ ಆಳುತ್ತಿರುವವರು ಈ ಹಿಂದುಳಿದ ಪ್ರದೇಶವನ್ನು ಆರ್ಥಿಕವಾಗಿ ವಿಕಾಸಗೊಳಿಸಲು ಪ್ರಯತ್ನಿಸಿದಿದ್ದಲ್ಲಿ ಈ ಪರಿಸ್ಥಿತಿ ಉಂಟಾಗುತ್ತಿರಲಿಲ್ಲವೆಂಬುದನ್ನು ಹೇಳಬೇಕಾಗಿದೆ. ಶ್ರೀಮತಿ ಇಂದಿರಾಗಾಂಧಿಯವರು ಹಾಗೂ ಅವರ ಸರ್ಕಾರ ಈ ಪರಿಸ್ಥಿತಿಗೆ ತಮ್ಮ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವಂತಿಲ್ಲ. ನಮ್ಮ ದೇಶದ ವಿರುದ್ಧ ನಡೆಯುತ್ತಿರುವ ಸಾಮ್ರಾಜ್ಯಶಾಹಿ ಪಿತೂರಿಗಳ ಅಪಾಯವನ್ನರಿತು ದೇಶದ ಐಕ್ಯತೆ, ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯವನ್ನು ಕಾಪಾಡಲು ಎಲ್ಲಾ ಎಡ, ಪ್ರಗತಿಶೀಲ ಶಕ್ತಿಗಳು ಹಾಗೂ ಪ್ರಜಾತಂತ್ರವಾದಿಗಳು ಮುಂಬರಬೇಕಾಗಿದೆ.

ಕೇಂದ್ರ ಹಾಗೂ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್(ಐ) ಸರ್ಕಾರಗಳ ಬಗ್ಗೆ ಜನತೆಯ ನಿರೀಕ್ಷೆಗಳು ಹುಸಿಯಾಗಿವೆ. ಅವರ ಸಮಸ್ಯೆಗಳು ಸ್ವಲ್ಪವೂ ಪರಿಹಾರವಾಗಿಲ್ಲ. ಕಾನೂನು ಮತ್ತು ವ್ಯವಸ್ಥೆಯ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿದೆ. ಹರಿಜನ-ಗಿರಿಜನರ ಮೇಲೆ ದಾಳಿಗಳು ಹಾಗೂ ಪೋಲೀಸರು ಮತ್ತು ಸಮಾಜ ವಿರೋಧಿ ಶಕ್ತಿಗಳಿಂದ ಮಹಿಳೆಯರ ಮಾನಭಂಗ ಇವುಗಳು ಪ್ರತಿದಿನದ ಸುದ್ದಿಯಾಗಿವೆ. ಜೀವನಾವಶ್ಯಕ ವಸ್ತುಗಳ ಬೆಲೆಗಳು ದಿನೇದಿನೇ ಏರುತ್ತಿವೆ. ಸಕ್ಕರೆ ಶ್ರೀ ಸಾಮಾನ್ಯನಿಗೆ ದೊರೆಯುತ್ತಿಲ್ಲ. ಬೆಲೆ ಏರಿಕೆಯು ಕಾರ್ಮಿಕವರ್ಗ, ಮಧ್ಯಮವರ್ಗ ಮತ್ತು ರೈತವರ್ಗವನ್ನು ಬಾಧಿಸುತ್ತಿದೆ, ರೈತರು ತಾವು ಬೆಳೆದ ಬೆಳೆಗಳಿಗೆ ಪ್ರತಿಫಲದಾಯಕ ಬೆಲೆಗಳು ದೊರೆಯದೆ ಅವುಗಳನ್ನು ಅತಿ ಕಡಿಮೆ ಬೆಲೆಯಲ್ಲಿ ಮಾರುವ ಬಲವಂತಕ್ಕೊಳಗಾಗಿದ್ದಾರೆ. ಅದೇ ಸಮಯದಲ್ಲಿ ಅವರು ತಮಗೆ ಬೇಕಾದ ವಸ್ತುಗಳನ್ನು ಅತಿಹೆಚ್ಚು ಬೆಲೆಕೊಟ್ಟು ಕೊಳ್ಳಬೇಕಾಗಿದೆ.

ಕಾಳಸಂತೆಕೋರರು, ಕಳ್ಳದಾಸ್ತಾನುಗಾರರು ಮತ್ತು ಕಳ್ಳಸಾಗಣೆದಾರರ ವಿರುದ್ಧ ಉಗ್ರಕ್ರಮವಹಿಸುವ ಬದಲಾಗಿ, ಟ್ರೇಡ್‌ಯೂನಿಯನ್ ಚಳವಳಿ ಹಾಗೂ ಕಾರ್ಮಿಕರ ನ್ಯಾಯಯುತ ಮುಷ್ಕರಗಳನ್ನು ಹತ್ತಿಕ್ಕಲು ಕರ್ನಾಟಕ ಸರಕಾರವು ಸ್ಥಾನಬದ್ಧತಾ ಸುಗ್ರೀವಾಜ್ಞೆಯನ್ನು ತರಲು ಯೋಚಿಸುತ್ತಿದೆ. ರಾಜ್ಯದ ಕಾರ್ಮಿಕವರ್ಗವು ಕರ್ನಾಟಕ ಅಗತ್ಯ ಸೇವೆಗಳ ನಿರ್ವಹಣಾ ಮಸೂದೆಯನ್ನು ಹಿಂತೆಗೆಯಲು ಒತ್ತಾಯಿಸಿ ತನ್ನ ಬೃಹತ್ ಐಕ್ಯತಾ ಕಾರ್ಯಾಚರಣೆಯ ಮೂಲಕ ತಾ. 18-8-80 ರಂದು ಸಾರ್ವತ್ರಿಕ ಮುಷ್ಕರ ಮತ್ತು ಬಂದ್‌ಗಳನ್ನು ಯಶಸ್ವಿಯಾಗಿ ನಡೆಸಿದ್ದರೂ, ಗುಂಡೂರಾಯರ ಸರ್ಕಾರವು ಇನ್ನೂ ಉಗ್ರ ಕಾಯ್ದೆಗಳನ್ನು ತರಲು ಮುನ್ನಡೆಯುತ್ತಿದೆ. ದುಡಿಯುವ ಜನತೆಯ ಪ್ರಜಾತಾಂತ್ರಿಕ ಹಕ್ಕುಗಳನ್ನು ಹತ್ತಿಕ್ಕಲು ಪ್ರಯತ್ನಿಸಲಾಗುತ್ತಿದೆ.

ಏರುತ್ತಿರುವ ಬೆಲೆಗಳು, ನೀರು ಮತ್ತು ಅಭಿವೃದ್ಧಿ ತೆರಿಗೆಗಳ ರದ್ಧತಿ ರೈತರಿಗೆ ಕೊಡಲಾದ ಸಾಲಗಳ ರದ್ಧತಿ ಮುಂತಾದ ನ್ಯಾಯಯುತ ಬೇಡಿಕೆಗಳಿಗಾಗಿ ಉತ್ತರ ಕರ್ನಾಟಕದ ರೈತರು ನಡೆಸಿದ ಚಳವಳಿಯನ್ನು ಸರ್ಕಾರವು ಲಾಠಿ ಮತ್ತು ಗುಂಡುಗಳಿಂದ ಎದುರಿಸಿ 25 ಜನರನ್ನು ಬಲಿತೆಗೆದುಕೊಂಡಿದ್ದು ಮತ್ತು ನೂರಾರು ಜನರನ್ನು ಗಾಯಗೊಳಿಸಿದ್ದು ಸರ್ಕಾರದ ಪೊಳ್ಳು ನೀತಿಯನ್ನು ಬಯಲಿಗೆಳೆದಿದೆ.

ಎಲ್ಲಾ ಕೋಮುವಾದಿ ಶಕ್ತಿಗಳನ್ನು ಹತ್ತಿಕ್ಕುವುದು ಅತ್ಯಗತ್ಯವಾಗಿದ್ದರೂ, ಕರ್ನಾಟಕದ ಮುಖ್ಯಮಂತ್ರಿಗಳು 'ಕರ್ನಾಟಕದಲ್ಲಿ ಕೋಮುಗಲಭೆಗಳು ನಡೆದಿಲ್ಲವಾದ್ದರಿಂದ ಕೋಮುವಾದಿ ಶಕ್ತಿಗಳ ವಿರುದ್ಧ ಉಗ್ರಕಮ ಅಗತ್ಯವಿಲ್ಲ' ಎಂದು ಹೇಳುವುದು ನಾಚಿಕೆಗೇಡಿನ ವಿಷಯವಾಗಿದೆ.

ಇವುಗಳಲ್ಲದೆ ಒಂದು ಲಕ್ಷ ನಿರುದ್ಯೋಗಿಗಳಿಗೆ ಉದ್ಯೋಗ ಕೊಡಬಲ್ಲ ವಿಜಯನಗರ ಉಕ್ಕು ಕಾರ್ಖಾನೆಯ ಸ್ಥಾಪನೆ, ಕ್ಯಾಪಿಟೇಶನ್ ಶುಲ್ಕ

[ಕಡೆಯ ಪುಟ ನೋಡಿ]

ಸ್ಥಾನಬದ್ಧತಾ ಕಾಯ್ದೆ ಜಾರಿ ವಿರುದ್ಧ ಕಾರ್ಮಿಕರ ಪ್ರತಿಭಟನೆ

ದಿನಾಂಕ 10-9-80ರಂದು ಬೆಂಗಳೂರು ಜಿಲ್ಲಾ ಸಿ. ಐ. ಟಿ. ಯು. ವಿನ ಆಶ್ರಯದಲ್ಲಿ ನೂರಾರು ಕಾರ್ಮಿಕರು ನಗರದ ಚಿಕ್ಕಲಾಲ್ ಬಾಗ್‌ನಿಂದ ರಾಜಭವನಕ್ಕೆ ಮೆರವಣಿಗೆ ಹೊಂಡೊಯ್ದು ಕರ್ನಾಟಕ ಮುಖ್ಯಮಂತ್ರಿ ತರಬೇಕೆಂದಿರುವ "ಸ್ಥಾನಬದ್ಧತಾ ಸುಗ್ರೀವಾಜ್ಞೆ" ವಿರುದ್ಧ ಮತಪ್ರದರ್ಶನ ನಡೆಸಿದರು.

ರಾಜ್ಯಪಾಲರಿಗೆ ಮನವಿ ಅರ್ಪಿಸಿದ ನಂತರ ನೆರೆದಿದ್ದ ಕಾರ್ಮಿಕರನ್ನು ಉದ್ದೇಶಿಸಿ ಸಿ.ಐ.ಟಿ.ಯು, ರಾಜ್ಯ ಘಟಕದ ಅಧ್ಯಕ್ಷ ಕಾಂ ಸೂರ್ಯನಾರಾಯಣರಾವ್ ಮಾತನಾಡುತ್ತಾ "ಕಾಳಸಂತೆಕೋರರು, ಕಳ್ಳಸಾಗಾಣಿಕೆಗಾರರು, ಅಕ್ರಮದಾಸ್ತಾನುಗಾರರ ಹೆಸರಿನಲ್ಲಿ ಮುಷ್ಕರ ಮಾಡುವ ಕಾರ್ಮಿಕರು, ಕಾರ್ಮಿಕ ಮುಖಂಡರನ್ನು ಸದೆಬಡಿಯುವ ಮುಖ್ಯಮಂತ್ರಿಯ ಕುತಂತ್ರದ ವಿರುದ್ಧ ಎಚ್ಚರಿಕೆ ನೀಡಿದರು."

ಬೆಂಗಳೂರು ಜಿಲ್ಲಾ ಸಿ ಐ ಟಿ. ಯು, ಅಧ್ಯಕ್ಷ ಕಾಂ. ಎನ್. ಎಲ್. ಉಪಾಧ್ಯಾಯ ಅವರು ಮಾತನಾಡುತ್ತಾ "ಕಾರ್ಮಿಕ ಕಾಯ್ದೆಯ ಚೌಕಟ್ಟಿನಲ್ಲಿ ಕಾರ್ಮಿಕರು ಮುಷ್ಕರ ಮಾಡುವದು ಅವರ ಹಕ್ಕು. ಮಾಲೀಕರು ಕಾರ್ಮಿಕರ ನ್ಯಾಯಬದ್ಧ ಬೇಡಿಕೆಗಳನ್ನು ಈಡೇರಿಸದೆ ಹಠಮಾರಿತನ ಮಾಡಿದಾಗ ಮಾತ್ರ ಕೊನೆಯ ಅಸ್ತ್ರವಾದಿ ಮುಷ್ಕರ ಬಳಕೆಯಾಗುತ್ತದೆಯೇ ವಿನಃ ಉತ್ಪಾದನೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಅಲ್ಲ" ಎಂದು ಸ್ಪಷ್ಟಪಡಿಸಿದರು. "ಆದ್ದರಿಂದ ಹಠಮಾರೀ ಮಾಲಕರನ್ನು ಶಿಕ್ಷಿಸುವ ಬದಲು ಕಾರ್ಮಿಕರ ಹಕ್ಕುಗಳನ್ನು ಮೊಟಕು ಮಾಡುವುದು ಸರ್ಕಾರದ ಅರೆಫ್ಯಾಸಿಸ್ಟ್ ದಬ್ಬಾಳಿಕೆಗೆ ನಿದರ್ಶನವಾಗಿದ್ದು, ಪ್ರಜಾಪ್ರಭುತ್ವ ಹಕ್ಕುಗಳ ದಮನಕಾರಿ ನೀತಿಯಾಗಿದೆ" ಎಂದರು.

ಕೊನೆಯಲ್ಲಿ ಸಿ. ಐ. ಟಿ. ಯು, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾಂ. ಟಿ. ಎಸ್. ಅನಂತರಾಂ ಮಾತನಾಡುತ್ತಾ "ಪ್ರಸ್ತುತ ಕಾನೂನಿನಲ್ಲಿ ಕಾಳಸಂತೆ ಖದೀಮರನ್ನು ಶಿಕ್ಷಿಸಲು ಸರಿಯಾದ ಅವಕಾಶ ಆಗುವಂತೆ ಅವುಗಳನ್ನು ತಿದ್ದುಪಡಿ ಮಾಡಬೇಕೇ ಹೊರತು, ವಿಚಾರಣೆ ಇಲ್ಲದೆ ಬಂಧಿಸುವ ಸುಗ್ರೀವಾಜ್ಞೆ ಸರ್ವಥಾ ಸಲ್ಲದು" ಎಂದು ತಿಳಿಸಿದರು.

ಸಿ. ಐ ಟಿ ಯು. ಮುಖಂಡರಾದ ಕಾಂ, ಎಸ್. ಸೂರ್ಯನಾರಾಯಣ ರಾವ್, ಕಾಂ. ಎನ್. ಎಲ್. ಉಪಾಧ್ಯಾಯ, ಕಾಂ, ಅನಂತರಾಂ ಮತ್ತು ಕಾಂ. ಆರ್. ಶ್ರೀನಿವಾಸ್ ಇವರನ್ನೊಳಗೊಂಡ ನಿಯೋಗ ರಾಜ್ಯಪಾಲರನ್ನು ಭೇಟಿಯಾಗಿ ಮನವಿ ಅರ್ಪಿಸಿದರು.

ನಿಯೋಗದೊಂದಿಗೆ ಚರ್ಚಿಸಿದ ರಾಜ್ಯಪಾಲರು "ಸ್ಥಾನಬದ್ಧತಾ ಸುಗ್ರೀವಾಜ್ಞೆ ಕ್ಯಾಬಿನೆಟ್‌ನಿಂದ ತೀರ್ಮಾನವಾಗಿ ಬಂದರೆ ನಾನು ಅದು ಕಾರ್ಮಿಕ ವಿರೋಧಿಯಾಗಿರದಂತೆ ನೋಡಿಕೊಳ್ಳುವೆ" ಎಂದು ಭರವಸೆ ನೀಡಿದರು.

●

ಶಿಡ್ಲಘಟ್ಟದಲ್ಲಿ ಯುವಜನ ಸಭೆ

'ಪ್ರಜಾಸತ್ತಾತ್ಮಕ ಯುವಜನ ಸಂಘಟನೆ'ಯ ಸ್ಥಳೀಯ ಸಭೆಯು ಸೆ.7ರಂದು ಶಿಡ್ಲಘಟ್ಟದಲ್ಲಿ ಜರುಗಿತು. ಸಭೆಗೆ ಪಟ್ಟಣದ ಹಲವಾರು ಯುವಜನರು ಆಗಮಿಸಿದ್ದರು, ಯುವಜನ ಸಂಘಟನೆಯ ರಾಜ್ಯ ಸಂಚಾಲಕ ಕಾಂ.ಜಿ.ವಿ. ಶ್ರೀರಾಮರೆಡ್ಡಿಯವರು ಸಭೆಯಲ್ಲಿ ಪಾಲ್ಗೊಂಡು ಯುವಜನ ಸಂಘಟನೆಯನ್ನು ಪ್ರಬಲವಾಗಿ ಕಟ್ಟುವ ಮತ್ತು ಸಂಘಟನೆಯ ಮಹತ್ವವನ್ನು ವಿವರಿಸಿದರು. ವಿದ್ಯಾರ್ಥಿ ಯುವಜನ ಮುಂದಾಳು ಕಾಂ. ಸಿ.ವಿ. ನಾರಾಯಣಸ್ವಾಮಿ ಅವರೂ ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯಲ್ಲಿ ರಚಿಸಲಾದ ತಾಲ್ಲೂಕು ಸಮಿತಿಗೆ ಕಾಂ. ಪಿ ಎಸ್. ವೆಂಕಟನಾರಾಯಣ ರೆಡ್ಡಿ ಮತ್ತು ಕಾಂ, ವಿ. ಸುಬ್ರಮಣ್ಯಾಚಾರಿ ಅವರನ್ನು ಸಂಚಾಲಕರನ್ನಾಗಿ ನೇಮಿಸಲಾಯಿತು,

○

ಬೀಡಿ ಕಾರ್ಮಿಕರ ಸಭೆ

ದ. ಕ. ಜಿಲ್ಲೆಯ ಕುಂದಾಪುರದ ಚರ್ಚ್‌ರೋಡ್ ವಠಾರದಲ್ಲಿ ಸ್ಥಳೀಯ ಬೀಡಿಕಾರ್ಮಿಕರನ್ನೊಳಗೊಂಡ ಸಭೆಯೊಂದನ್ನು 5-9-1980 ರಂದು ಕಾಂ. ಸಿ. ನಾರಾಯಣರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಕಾಂ. ವಿ. ಮಹಾಬಲರವರು ಮಾತನಾಡಿದರು.

ಸಭೆಯ ಕೊನೆಯಲ್ಲಿ ಸ್ಥಳೀಯವಾಗಿ ಬೀಡಿಕಾರ್ಮಿಕರನ್ನು ಅಧಿಕ ಸಂಖ್ಯೆಯಲ್ಲಿ ಸಂಘಟಿಸುವ ಉದ್ದೇಶದಿಂದ ಕಾರ್ಯಕಾರಿ ಸಮಿತಿಯೊಂದನ್ನು ಆಯ್ಕೆಮಾಡಲಾಯಿತು. ಸಮಿತಿ ಅಧ್ಯಕ್ಷಿಣಿಯಾಗಿ ಗುಲಾಬಿ, ಕಾರ್ಯದರ್ಶಿನಿಯಾಗಿ ರವಿಕಲಾ, ಜೊತೆ ಕಾರ್ಯದರ್ಶಿನಿಯಾಗಿ ಲಚ್ಚಬಾಯಿ ಮತ್ತು ಸಮಿತಿ ಸದಸ್ಯರುಗಳಾಗಿ ಸರಸ್ವತಿ, ಜಯಂತಿ, ಜಲಜ, ಕಮಲ, ಲಕ್ಷ್ಮಿ, ಯಶೋಧ ಹಾಗೂ ರಾಜೀವಿಯವರುಗಳನ್ನು ನೇಮಿಸಲಾಯಿತು.

○

ಕುಂದಾಪುರದಲ್ಲಿ ಯುವ, ವಿದ್ಯಾರ್ಥಿ, ಸಮುದಾಯ ಕಛೇರಿ ಆರಂಭ

5-9-1980ರಂದು ದ. ಕ. ಜಿಲ್ಲೆಯ ಕುಂದಾಪುರದಲ್ಲಿ ಎಸ್. ಎಫ್ ಐ. ಡಿ.ವೈ.ಎಫ್. ಮತ್ತು ಸಮುದಾಯ ಸಂಘಟನೆಗಳು ಜೊತೆಸೇರಿ ಆರಂಭಿಸಿರುವ ಹೊಸ ಕಛೇರಿಯೊಂದನ್ನು ಉದ್ಘಾಟಿಸಲಾಯಿತು. ರೂ. 100ರ ಮಾಸಿಕ ಬಾಡಿಗೆಯದ್ದಾಗಿರುವ ಈ ಕಛೇರಿಯನ್ನು ನಡೆಸಿಕೊಂಡು ಹೋಗುವರೇ ಸರ್ವರೀತಿಯ ಬೆಂಬಲವನ್ನು ನೀಡಲು ಸ್ಥಳೀಯ ಎಡ ಮತ್ತು ಪ್ರಗತಿಪರ ವ್ಯಕ್ತಿಗಳು ಮುಂದಾಗಿರುವುದು ಗಮನಾರ್ಹ ವಿಚಾರ. ಕಛೇರಿಯ ಹೊಸ

ವಿಳಾಸ :-

ಎಲ್. ಐ. ಸಿ. ಕಛೇರಿ ಬಳಿ
ಕುಂದಾಪುರ
(ದ. ಕ.)

●

ಹವನ-ಹೋಮಗಳಿಗೆ ಯುವಜನರ ಪ್ರತಿಭಟನೆ

ಮೂಢನಂಬಿಕೆ, ಕಂದಾಚಾರ, ಸಂಪ್ರದಾಯಗಳನ್ನು ಸಮಾಜದಿಂದ ಕಿತ್ತುಹಾಕುವ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಬೇಕಾದ ಶಿಕ್ಷಣ ಸಂಸ್ಥೆಗಳೇ ಅವುಗಳನ್ನು ಪೋಷಿಸಿಕೊಂಡು ಬರುತ್ತಿರುವ ಸಂಗತಿಗಳು ಅಪರೂಪವೇನಲ್ಲ. ಇಂತಹುದೊಂದು ಘಟನೆ ಶಿವಮೊಗ್ಗದ ಡಿ ವಿ. ಎಸ್. ಶಿಕ್ಷಣ ಸಂಸ್ಥೆಯಿಂದ ಜರುಗಿದೆ.

ಸಂಸ್ಥೆಯು ತನ್ನ ಜ್ಯೂನಿಯರ್ ಕಾಲೇಜಿನ ಹೊಸ ಕಟ್ಟಡದ ಉದ್ಘಾಟನೆಯನ್ನು 'ಹೋಮ-ಹವನ'ಗಳ ಆಚರಣೆಯ ಮೂಲಕ ಸೆ 4ರಂದು ನೆರವೇರಿಸಿತು.

ಆಧುನೀಕತೆಗೆ, ಪ್ರಗತಿಪರ ವಿಚಾರಗಳಿಗೆ ಮತ್ತು ವೈಜ್ಞಾನಿಕ ತಿಳುವಳಿಕೆಗೆ ಸಹಜವಾಗಿ ಹಾತೊರೆಯುವ ಎಲ್ಲ ಯುವಜನರಂತೆ ಶಿವಮೊಗ್ಗದ ಯುವಜನರೂ ಹಾತೊರೆದರು. ಶಿವಮೊಗ್ಗದ ಕಾಲೇಜು ಯುವಕ-ಯುವತಿಯರು, ಪ್ರಗತಿಪರ ಅಧ್ಯಾಪಕರು, ಸ್ಥಳೀಯ ವಕೀಲರು, ವೈದ್ಯರು, ವಿಮಾನೌಕರರು, ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಸದಸ್ಯರು ಮತ್ತು 'ಸಮುದಾಯ' ಸದಸ್ಯರು ಒಟ್ಟಾಗಿ ಕೂಡಿ ಹವನ-ಹೋಮಗಳಿಗೆ ಉಗ್ರ ಪ್ರತಿಭಟನೆ ಸಲ್ಲಿಸಿದರು.

"ಹವನ-ಹೋಮಗಳಿಗೆ ಧಿಕ್ಕಾರ, ಮೂಢನಂಬಿಕೆಯನ್ನು ಬೆಳೆಸುವ ವಿದ್ಯಾಕ್ಷೇತ್ರಗಳಿಗೆ ಧಿಕ್ಕಾರ" ಎಂಬ ಘೋಷಣೆಗಳೊಂದಿಗೆ ಶಿವಮೊಗ್ಗ ಮುಖ್ಯ ರಸ್ತೆಗಳಾದ ನೆಹ್ರೂರಸ್ತೆ. ಬಿ ಎಚ್. ರಸ್ತೆ ಮತ್ತು ಎಂ.ವಿ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು.

ಶಾಂತ ರೀತಿಯಲ್ಲಿ ತಮ್ಮ ಪ್ರತಿಭಟನೆಯನ್ನು ವ್ಯಕ್ತಮಾಡಿದ ಕೆಲವು ಪ್ರಾಧ್ಯಾಪಕರ ಮೇಲೆ ಡಿ. ವಿ. ಎಸ್, ಶಿಕ್ಷಣ ಸಮಿತಿಯ ಆಡಳಿತವರ್ಗವು ಶಿಸ್ತಿನ ಕ್ರಮಕೈಗೊಳ್ಳಲು ಯೋಚಿಸುತ್ತಿದೆ ಎಂದು ತಿಳಿದು ಬಂದಿದೆ.

ವಿದ್ಯಾರ್ಥಿಗಳ ಮೇಲಾಗಲೀ, ಪ್ರಾಧ್ಯಾಪಕರ ಮೇಲಾಗಲೀ ಯಾವುದೇ ಶಿಸ್ತಿನ ಕ್ರಮಕೈಗೊಂಡಿದ್ದಾದಲ್ಲಿ ಉಗ್ರ ಹೋರಾಟ ನಡೆಸುವುದಾಗಿ ನಗರದ 'ವಿಚಾರವಾದಿ ಸಂಘ' ತಿಳಿಸಿದೆ.

●

ಎಸ್.ಎಫ್.ಐ.ವಿಜಯ

ತುಮಕೂರು ಜಿಲ್ಲೆ ಯತಿಪಟೂರು ಕಲ್ಪತರು ಕಾಲೇಜು ವಿದ್ಯಾರ್ಥಿ ಸಂಘಕ್ಕೆ ಆಗಸ್ಟ್ 23 ರಂದು ನಡೆದ ಚುನಾವಣೆಯಲ್ಲಿ ಎಸ್. ಎಫ್. ಐ. ಅಭ್ಯರ್ಥಿಗಳಾದ ಕಾಂ. ಉದಯಕುಮಾರ್ ಉಪಾಧ್ಯಕ್ಷರಾಗಿಯೂ, ಕಾಂ, ರಾಜಣ್ಣ ಸಹಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿದ್ದಾರೆ. ಹಾಗೂ ಬಹುಸಂಖ್ಯೆಯಲ್ಲಿ ತರಗತಿ ಪ್ರತಿನಿಧಿಗಳು ಆರಿಸಿ ಬಂದಿದ್ದಾರೆ.

ಚುನಾವಣೆಯಲ್ಲಿ ವಿಜಯಿಗಳಾದವರಿಗೂ ಮತ್ತು ತಿಪಟೂರು ಶಾಖೆಯ ಕಾರ್ಯಕರ್ತರಿಗೂ ಎಸ್. ಎಫ್. ಐ. ರಾಜ್ಯ ಸಮಿತಿಯು ಅಭಿನಂದನೆ ಸಲ್ಲಿಸಿದೆ,

●

ತಲಪಾಡಿಯಲ್ಲಿ ಯುವಜನ ಸಭೆ

ರಾಜ್ಯದ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ತಲಪಾಡಿ ಘಟಕದ ಸಭೆಯು ಸೆ. 7ರಂದು, ಊರಿನ "ರೆಡ್‌ಸ್ಟಾರ್‌ಕ್ಲಬ್"ನಲ್ಲಿ ಸೇರಿದ್ದಿತು.

ಮಂಗಳೂರು ತಾಲ್ಲೂಕಿನ ಡಿ.ವೈ. ಓ. ಸಂಘಟನೆಯ ಸಂಚಾಲಕ ಕಾಂ, ಉಮಾನಾಥ್ ಅವರು ಗ್ರಾಮದ ಯುವಜನತೆಗೆ "ಪ್ರಜಾಸತ್ತಾತ್ಮಕ ಯುವಜನ ಸಂಘಟನೆ"ಯ ಧ್ಯೇಯ ಧೋರಣೆಗಳನ್ನು ವಿವರಿಸಿದರು. ಕಾಂ. ಎಂ. ಪದ್ಮನಾಭನ್ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಂಗಳೂರು ತಾಲ್ಲೂಕು ಸಮಿತಿ ಸದಸ್ಯ ಕಾಂ. ಉಚ್ಚಿಲ ರಾಮಚಂದ್ರ ಅವರೂ ಸಭೆಯಲ್ಲಿ ಪಾಲ್ಗೊಂಡಿದ್ದರು. ಯುವಜನ ಸಂಘಟನೆಗೆ ಹತ್ತು ಜನರನ್ನೊಳಗೊಂಡ ಸಮಿತಿಯೊಂದನ್ನು ಆಯ್ಕೆಮಾಡಿ ಸಮಿತಿಯ ಸಂಚಾಲಕರುಗಳನ್ನಾಗಿ ಕಾಂ. ಎಂ. ಪದ್ಮನಾಭನ್ ಮತ್ತು ಕಾಂ. ಎಂ. ಮಹಮ್ಮದ್ ಅವರನ್ನು ಆಯ್ಕೆಮಾಡಲಾಯಿತು,

○

ಮೂಡಿಗೆರೆಯಲ್ಲಿ ಪೋಲೀಸ್ ದೌರ್ಜನ್ಯ ವಿರೋಧಿ ದಿನ

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಮತ್ತು ಬಣಕಲ್ ಪೋಲೀಸ್ ಠಾಣೆಗಳ ಮುಂದೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸ್ಥಳೀಯ ಶಾಖೆಗಳು ಪೋಲೀಸ್ ದೌರ್ಜನ್ಯದ ವಿರುದ್ಧ ಧರಣಿ ಮುಷ್ಕರ ಆಚರಿಸಿದರೆಂದು ತಡವಾಗಿ ಬಂದ ವರದಿಗಳು ತಿಳಿಸಿವೆ.

ಧರಣಿ ಮುಷ್ಕರದ ನಂತರ ಪಕ್ಷದ ಮುಂದಾಳಾದ ಕಾಂ. ಎ. ಸಿ. ಕೇಶವ ಅವರು ಪೋಲೀಸ್ ಅಧಿಕಾರಿಗಳಿಗೆ ಮನವಿಪತ್ರ ಸಲ್ಲಿಸಿದರು. ಧರಣಿ ಮುಷ್ಕರದಲ್ಲಿ ಚಂದ್ರಪುರ ಮತ್ತು ಸತ್ಯ ಎಸ್ಟೇಟಿನ ಕಾರ್ಮಿಕರು ಪಾಲ್ಗೊಂಡಿದ್ದರು.

ಬಣಕಲ್ ತಾಲ್ಲೋಕಿನಲ್ಲಿ ನಡೆದ ಆ 31ರ ಕಾರ್ಯಕ್ರಮದಲ್ಲಿ ಹನಿವೇಲ್, ದೊಡ್ಡನಂದಿ ಮತ್ತು ಬಿಲ್ಲಟ್ಟ ಎಸ್ಟೇಟಿನ ಕಾರ್ಮಿಕರು ಪಾಲ್ಗೊಂಡಿದ್ದು ಎಸ್.ಎಫ್.ಐ.ನ ರಾಜ್ಯ ಸಮಿತಿಯ ಸದಸ್ಯ ಎಸ್.ಪಿ. ಪ್ರಕಾಶ್, ಸಿ. ಐ. ಟಿ. ಯು.ನ ಕಾಂ. ಅಪ್ಪ ಅವರು ಧರಣಿ ಮುಷ್ಕರದ ನೇತೃತ್ವ ವಹಿಸಿದ್ದರು,

●

ಆರ್ಥಿಕ ಸಮೀಕ್ಷೆ :

ಆರ್ಥಿಕ ತುರ್ತುಪರಿಸ್ಥಿತಿಯ ಕುರಿತು

ಆರ್. ಚಂದ್ರ

ಬೆಲೆಏರಿಕೆ, ಹಣದುಬ್ಬರ ಇತ್ಯಾದಿ ಸಮಸ್ಯೆಗಳಿಂದೊಡಗೂಡಿದ ದೇಶದ ಸದ್ಯದ ತೀವ್ರ ಆರ್ಥಿಕ ದುಃಸ್ಥಿತಿಯನ್ನು ಹೋಗಲಾಡಿಸಲು ಸಂವಿಧಾನದ 360ನೇ ನಿಬಂಧದಲ್ಲಿ ಸೂಚಿಸಿದಂತೆ 'ಆರ್ಥಿಕ ತುರ್ತು ಪರಿಸ್ಥಿತಿ' (Financial Emergency) ಯನ್ನು ಘೋಷಿಸಬೇಕೆಂದು ಇಂದಿರಾ ಕಾಂಗ್ರೆಸ್ ಸರಕಾರದ ಕೆಲವು ಮಂತ್ರಿಗಳೂ ಪಕ್ಷಾಧಿಕಾರಿಗಳೂ, ಕೆಲವು ಸರಕಾರಿ ಆರ್ಥಿಕತಜ್ಞರೂ ಇತ್ತೀಚೆಗೆ ಸಲಹೆ ಮಾಡುತ್ತಿದ್ದಾರೆ ಆಶ್ಚರ್ಯದ ಸಂಗತಿ ಎಂದರೆ, ಕರ್ನಾಟಕದ ಮಾಜಿ ಕಂದಾಯ ಮಂತ್ರಿಯೂ ರಾಜ್ಯದ ಕಾಂಗ್ರೆಸ್ (ಯು) ನಾಯಕರೂ ಆಗಿರುವ ಬಸವಲಿಂಗಪ್ಪನವರೂ ಆರ್ಥಿಕ ತುರ್ತುಪರಿಸ್ಥಿತಿಯನ್ನು ಜಾರಿಗೊಳಿಸಬೇಕೆಂದು ಸಮರ್ಥಿಸುತ್ತಿದ್ದಾರೆ. ಸಂವಿಧಾನದಲ್ಲಿ ಸೂಚಿಸಿರುವ ಆರ್ಥಿಕ ತುರ್ತುಪರಿಸ್ಥಿತಿಯ ನಿಜವಾದ ಅರ್ಥವೇನು?

ಇಡೀ ದೇಶದ ಅಥವಾ ಅದರ ಯಾವುದೇ ಒಂದು ಪ್ರದೇಶದ ಆರ್ಥಿಕ ಸ್ಥಿರತೆ ಅಥವಾ ವಿಶ್ವಾಸಾರ್ಹತೆ ಹದಗೆಡುವ ಭಯವಿದ್ದಾಗ ರಾಷ್ಟ್ರಾಧ್ಯಕ್ಷರು ಆರ್ಥಿಕ ತುರ್ತುಪರಿಸ್ಥಿತಿಯನ್ನು ಘೋಷಿಸಬಹುದಾಗಿದೆ. ಆರ್ಥಿಕ ತುರ್ತುಪರಿಸ್ಥಿತಿಯು ಜಾರಿಯಲ್ಲಿರುವಾಗ ಆರ್ಥಿಕ ವಿಷಯಗಳಲ್ಲಿ ಸೂಕ್ತವಾಗಿ ನಡೆದುಕೊಳ್ಳಲು ಯಾವುದೇ ರಾಜ್ಯಕ್ಕೆ ನಿರ್ದೇಶನ ಕೊಡಲು ಕೇಂದ್ರವು ಅಧಿಕಾರ ಪಡೆಯುವುದು. ಅಂದರೆ, ರಾಜ್ಯಗಳಿಗಿರುವ ಅಲ್ಪಸ್ವಲ್ಪ ಆರ್ಥಿಕ ಸ್ವಾಯತ್ತತೆಯೂ ಇಲ್ಲದಂತಾಗುವುದು. ರಾಜ್ಯಗಳ ಎಲ್ಲಾ ಆರ್ಥಿಕ ವಿಷಯಗಳಲ್ಲಿ ಕೇಂದ್ರ ಸಂಪೂರ್ಣವಾಗಿ ಹಸ್ತಕ್ಷೇಪ ಮಾಡಬಹುದು. ತೆರಿಗೆ ಹೇರುವುದು, ತೆಗೆದು ಹಾಕುವುದು, ರಿಯಾಯಿತಿ ನೀಡುವುದು, ಇತರ ಬದಲಾವಣೆಗಳನ್ನು ಮಾಡುವುದು, ಸಾಲಪಡೆಯುವುದು ಮತ್ತು ಮರುಪಾವತಿ ಮಾಡುವುದು, ಸಾಲಕ್ಕೆ ಜಾಮೀನು ನೀಡುವುದು, ಹೊಸ ಆರ್ಥಿಕ ಹೊಣೆಗಾರಿಕೆ ನಿರ್ವಹಿಸುವುದು, ಖರ್ಚು ವೆಚ್ಚಗಳನ್ನು ನಡೆಸುವುದು, ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ಆರ್ಥಿಕ ಮಸೂದೆಗಳು (Money Bills) ವಿಧಾನಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ಅಂಗೀಕಾರವಾದ ನಂತರ ಅವುಗಳನ್ನು ರಾಷ್ಟ್ರಾಧ್ಯಕ್ಷರ ಒಪ್ಪಿಗೆಗಾಗಿ ಕಡ್ಡಾಯವಾಗಿ ಕೇಂದ್ರಕ್ಕೆ ಕಳುಹಿಸಿಕೊಡಬೇಕಾಗುವುದು. ಆರ್ಥಿಕ ತುರ್ತು ಪರಿಸ್ಥಿತಿ ಇಲ್ಲದಿರುವಾಗ ರಾಜ್ಯದ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ಮಸೂದೆಗಳನ್ನೂ ರಾಜ್ಯಪಾಲರ ಒಪ್ಪಿಗೆಗೆ ಕಳುಹಿಸಿಕೊಟ್ಟರಾಯಿತು. ರಾಜ್ಯಪಾಲರು ಸಮ್ಮತಿ ನೀಡದೆ ಆರ್ಥಿಕ ಮಸೂದೆಗಳನ್ನಷ್ಟೆ ರಾಷ್ಟ್ರಾಧ್ಯಕ್ಷರ ಸಮ್ಮತಿಗಾಗಿ ಕೇಂದ್ರಕ್ಕೆ ಕಳುಹಿಸಿಕೊಟ್ಟರಾಯಿತು.

ಆರ್ಥಿಕ ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಕೇಂದ್ರವು ತನ್ನ ಹಾಗೂ ರಾಜ್ಯಗಳ ಸೇವಾ ಸಿಬ್ಬಂದಿಗಳ ವೇತನಗಳನ್ನೂ ಇತರ ಭತ್ತೆಗಳನ್ನೂ ಕಡಿತಗೊಳಿಸಲು ನಿರ್ದೇಶನ ನೀಡಬಹುದು. ಹಾಗೆಯೇ, ಸುಪ್ರೀಂ ಕೋರ್ಟು, ಹೈಕೋರ್ಟುಗಳ ನ್ಯಾಯಾಧೀಶರೂ ಸೇರಿದಂತೆ ಎಲ್ಲಾ ನ್ಯಾಯಾಧೀಶರ ವೇತನಗಳನ್ನೂ ಭತ್ತೆಗಳನ್ನೂ ಕಡಿತಗೊಳಿಸಲು ಕೇಂದ್ರವು ನಿರ್ದೇಶನ ನೀಡಬಹುದು.

ಆಂತರಿಕ ತುರ್ತುಪರಿಸ್ಥಿತಿ ಘೋಷಿಸಿದಾಗ ಹೇಗೆ ನಾಗರಿಕರ ಮೂಲಭೂತ ಹಕ್ಕುಗಳೂ, ರಾಜ್ಯಗಳ ಸ್ವಾಯತ್ತತೆಯೂ ಅಮಾನತುಗೊಳಿಸಲ್ಪಟ್ಟು ಎಲ್ಲಾ ಅಧಿಕಾರಗಳೂ ಕೇಂದ್ರಕ್ಕೆ ಹಸ್ತಾಂತರವಾಗಿ ಸಂಪೂರ್ಣ ಸರ್ವಾಧಿಕಾರ ಸ್ಥಾಪನೆಯಾಗುವುದೋ, ಹಾಗೆಯೇ ಆರ್ಥಿಕ ತುರ್ತು ಪರಿಸ್ಥಿತಿಯಲ್ಲಿಯೂ ಆರ್ಥಿಕ ವಿಷಯಗಳಲ್ಲಿ ರಾಜ್ಯಗಳು ತಮ್ಮ ಸ್ವಾಯತ್ತತೆಯನ್ನು ಕಳೆದುಕೊಳ್ಳುವುವು ಮತ್ತು ಸರಕಾರಿ ನೌಕರರು ತಮ್ಮ ವೇತನ ಹಾಗೂ ಭತ್ತೆಗಳಲ್ಲಿ ಕಡಿತ ಅನುಭವಿಸುವರು ಮತ್ತು ದೇಶಾದ್ಯಂತ ಸೀಮಿತ ಸರ್ವಾಧಿಕಾರ ಸ್ಥಾಪಿತವಾಗುವುದು. ಆರ್ಥಿಕ ತುರ್ತುಪರಿಸ್ಥಿತಿಯನ್ನು ಘೋಷಿಸುವುದು ಆಂತರಿಕ ತುರ್ತು ಪರಿಸ್ಥಿತಿಯನ್ನು ಘೋಷಿಸಿದಂತೆಯೇ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಕ್ರಮ ಎಂದು ಬೇರೆ ಹೇಳಬೇಕಾಗಿಲ್ಲ.

1930ರ ದಶಕದಲ್ಲಿ ಬಂಡವಾಳಶಾಹಿ ರಾಷ್ಟ್ರಗಳು ತೀವ್ರ ಆರ್ಥಿಕಕುಸಿತ (Economic depression) ದಿಂದಾಗಿ ತಲೆದೋರಿದ ನಿರುದ್ಯೋಗ, ಮಾರುಕಟ್ಟೆಯ ಅಭಾವ, ಕಾರ್ಮಿಕ ಅಶಾಂತಿ, ಮುಂತಾದವುಗಳನ್ನು ಎದುರಿಸಲು ಅಮೇರಿಕ, ಕೆನಡಾ, ಆಸ್ಟ್ರೇಲಿಯಾ ಇತ್ಯಾದಿ ದೇಶಗಳಲ್ಲಿನ ಕೇಂದ್ರಸರಕಾರಗಳು ರಾಜ್ಯಗಳ ಸ್ವಾಯತ್ತತೆಯನ್ನು ಮೊಟಕುಗೊಳಿಸಲು ಮತ್ತು ಕಾರ್ಮಿಕರ ಸಂಘಟನೆಯನ್ನು ಮುರಿಯಲು, ಅವರ ಸಂಬಳ ಸವಲತ್ತುಗಳನ್ನು ಕಡಿಮೆ ಮಾಡಲು ಕರಾಳ ಶಾಸನಗಳನ್ನು ಜಾರಿಗೆ ತಂದವು. ಆದರೆ, ಅಂತಹ ಶಾಸನಗಳನ್ನು ಸಂಘಟಿತ ಕಾರ್ಮಿಕ ಹೋರಾಟಗಳಿಂದ ಪ್ರಬಲವಾಗಿ ವಿರೋಧಿಸಿದುದೇ ಅಲ್ಲದೆ, ಆದೇಶಗಳ ಶ್ರೇಷ್ಠ ನ್ಯಾಯಾಲಯಗಳು ಅಂತಹ ಕರಾಳ ಶಾಸನಗಳು ಸಂವಿಧಾನಕ್ಕೆ ವಿರೋಧವಾದವುಗಳೆಂದು ತೀರ್ಮಾನಿಸಿದವು, ಕಾರ್ಮಿಕ ವಿರೋಧಿ ಶಾಸನಗಳು ನಿಷ್ಕ್ರಿಯವಾದವು ಕಾರ್ಮಿಕರ, ಪ್ರಜೆಗಳ ಮೂಲಭೂತ ಹಕ್ಕುಗಳೂ, ರಾಜ್ಯಗಳ ಸ್ವಾಯತ್ತತೆಯೂ ಪುನಃ ಎತ್ತಿಹಿಡಿಯಲ್ಪಟ್ಟವು.

ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಆರ್ಥಿಕ ದುಃಸ್ಥಿತಿಯನ್ನು ಎದುರಿಸಲು ರಾಜ್ಯ ಸ್ವಾಯತ್ತತೆಗೆ ವಿರೋಧವಾದ, ಕಾರ್ಮಿಕರಿಗೆ ವಿರೋಧವಾದ, ಪ್ರಜಾಪ್ರಭುತ್ವಕ್ಕೆ ವಿರೋಧವಾದ, ಸರ್ವಾಧಿಕಾರಿ ಪ್ರವೃತ್ತಿಯ ಶಾಸನಗಳನ್ನು ಜಾರಿಗೆ ತರುವುದರಲ್ಲಿ ಕಂಡುಬಂದ ಅಡೆತಡೆಗಳ ಅನುಭವದ ಹಿನ್ನೆಲೆಯಲ್ಲಿ ಭಾರತದ ಬಂಡವಾಳಶಾಹಿ-ಭೂಮಾಲೀಕ ಪರವಾದ ಸಂವಿಧಾನದಲ್ಲಿ ಆರ್ಥಿಕ ತುರ್ತುಪರಿಸ್ಥಿತಿಯನ್ನು ಘೋಷಿಸಲು ಕೇಂದ್ರಕ್ಕೆ ವಿಶೇಷ ಅಧಿಕಾರವನ್ನು ನೀಡಲಾಗಿದೆ ಆದುದರಿಂದ ಅಂತಹ ಕರಾಳ ಶಾಸನಗಳು ಜಾರಿಗೆ ಬಂದಾಗ ನ್ಯಾಯಾಲಯಗಳ ಮೊರೆಹೋಗುವುದರಿಂದ ಹೆಚ್ಚು ಪ್ರಯೋಜನವಾಗಲಾರದು, ಬದಲು, ಕಾರ್ಮಿಕರ ಸಂಘಟಿತ ಹೋರಾಟಗಳಿಂದ, ವ್ಯಾಪಕವಾದ ಪ್ರಜಾಪ್ರಭುತ್ವವಾದಿ ಹೋರಾಟಗಳಿಂದ ಅಂತಹ ಜನವಿರೋಧಿ ಶಾಸನಗಳನ್ನು ರಚಿಸದಂತೆ, ಅವುಗಳನ್ನು ಕಾರ್ಯಗತಗೊಳಿಸದಂತೆ ನೋಡಿಕೊಳ್ಳಬೇಕಾಗುವುದು.

ನಮ್ಮ ದೇಶದ ಸದ್ಯದ ಪರಿಸ್ಥಿತಿಯಲ್ಲಿ ಆರ್ಥಿಕ ತುರ್ತುಪರಿಸ್ಥಿತಿಯನ್ನು ಜಾರಿಗೊಳಿಸಿದರೆ ಆಗುವ ಅನಾಹುತಗಳನ್ನು ಸ್ವಲ್ಪ ವಿವರವಾಗಿ ಗಮನಿಸುವಾ,

1, ಕೇಂದ್ರ ಮತ್ತು ರಾಜ್ಯಸರಕಾರಗಳ ನೌಕರರ ಸಂಬಳ ಸವಲತ್ತುಗಳು ಕಡಿಮೆಯಾಗುವುದರೊಂದಿಗೇ, ಇತರ ಕಾರ್ಮಿಕರ, ನೌಕರರ ವೇತನಗಳೂ ಭತ್ತೆಗಳೂ ಸ್ಥಗಿತಗೊಳ್ಳಬಹುದು, ಕಡಿತಗೊಳ್ಳಬಹುದು, ವೇತನ ಪರಿಷ್ಕರಣಗಳನ್ನು ತಡೆಹಿಡಿಯಬಹುದು, ಕಡ್ಡಾಯ ಠೇವಣಿಯನ್ನು ಪುನಃ ಪ್ರಾರಂಭಿಸಬಹುದು, ಬೆಲೆಏರಿದಂತೆ ಜೀವನವೆಚ್ಚಕ್ಕನುಗುಣವಾಗಿ ತುಟ್ಟಿಭತ್ತೆ ಕೊಡುವುದನ್ನೂ ನಿಲ್ಲಿಸಬಹುದು, ಬೋನಸ್ಸನ್ನು ಮುಂದೂಡಿದ ವೇತನದ ಆಧಾರದಲ್ಲಿ ಕೊಡುವುದನ್ನು ನಿಲ್ಲಿಸಬಹುದು. ಕೈಗಾರಿಕೋದ್ಯಮಗಳು ನಷ್ಟಹೊಂದುತ್ತಿರುವ ನೆಪದಿಂದ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಬಹುದು, ಕೈಗಾರಿಕೋದ್ಯಮಗಳು ಆಂತರಿಕ ಹಾಗೂ ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ತಮ್ಮ ಪೈಪೋಟಿ ಹಾಗೂ ಲಾಭ ಹೆಚ್ಚಿಸಲು ಯಾಂತ್ರೀಕರಣ ಹಾಗೂ ಗಣಕೀಕರಣಗೊಳಿಸಿ ಕಾರ್ಮಿಕರನ್ನು ನಿರುದ್ಯೋಗಿಗಳನ್ನಾಗಿಸಬಹುದು, ಕಾರ್ಮಿಕರ ಕಲ್ಯಾಣಕ್ಕಾಗಿ ಪ್ರಾವಿಡೆಂಟ್ ಫಂಡ್, ಪೆನ್‌ಷನ್, ಗ್ರಾಚ್ಯುಟಿ, ವಸತಿ, ಆರೋಗ್ಯ ಮುಂತಾದ ವೆಚ್ಚಗಳನ್ನು ಕಡಿಮೆಗೊಳಿಸಬಹುದು, ಕಾರ್ಮಿಕರ ಮತ್ತು ನೌಕರರ ಸಂಘಟಿತ ಹೋರಾಟಗಳನ್ನು ಹತ್ತಿಕ್ಕಬಹುದು ಮತ್ತು ಕಾರ್ಮಿಕ ಧುರೀಣರ ವಿರುದ್ಧ ಗಡೀಪಾರು ಸ್ಥಾನಬದ್ಧತೆಯೇ ಮೊದಲಾದ ಕಠಿಣ ಕ್ರಮಕೈಕೊಳ್ಳಬಹುದು.

2. ಆರ್ಥಿಕ ಯೋಜನೆಗಳನ್ನು ಕಾರ್ಯಗತಗೊಳಿಸುವ ಹೆಚ್ಚಿನ ಹೊಣೆಗಾರಿಕೆ ರಾಜ್ಯಸರಕಾರಗಳಿಗಿದ್ದರೂ, ಅದಕ್ಕೆ ಬೇಕಾದಷ್ಟು ಸಂಪನ್ಮೂಲಗಳನ್ನು ತೆರಿಗೆ, ಸಾಲ, ಉಳಿತಾಯ, ಇತ್ಯಾದಿಗಳಿಂದ ಪಡೆಯಲು ರಾಜ್ಯಸರಕಾರಗಳಿಗೆ ಈಗಿನ ಸಂವಿಧಾನದಲ್ಲಿ ಸಾಕಷ್ಟು ಅವಕಾಶಗಳಿಲ್ಲ ಆದುದರಿಂದ ರಾಜ್ಯಗಳು ತಮ್ಮ ಅಭಿವೃದ್ಧಿ ಯೋಜನೆಗಳಿಗೂ ಆಡಳಿತ ವೆಚ್ಚಗಳಿಗೂ ಹೆಚ್ಚಾಗಿ ಕೇಂದ್ರದ ಸಾಲ, ನೆರವುಗಳನ್ನೇ ಅವಲಂಬಿಸಬೇಕಾಗುವುದು. ನಿರುದ್ಯೋಗ, ಬೆಲೆಏರಿಕೆ, ನಿರಕ್ಷರತೆ, ಆರೋಗ್ಯ, ವಸತಿ, ನೀರಾವರಿ, ವಿದ್ಯುತ್, ವ್ಯವಸಾಯ, ಆಡಳಿತ ಮುಂತಾದ ಎಲ್ಲಾ ಸಮಸ್ಯೆಗಳನ್ನೂ ರಾಜ್ಯಸರಕಾರಗಳೇ ನೋಡಿಕೊಳ್ಳಬೇಕಾಗುವುದು. ರಾಜ್ಯಗಳು ಕೇಂದ್ರದ ಸಾಲ, ನೆರವುಗಳನ್ನೇ ಹೆಚ್ಚಾಗಿ ಅವಲಂಬಿಸಬೇಕಾಗುವುದರಿಂದ ಈಗಾಗಲೇ ತಮ್ಮ ಸ್ವಾಯತ್ತತೆಯನ್ನು ಸಾಕಷ್ಟು ಕಳೆದುಕೊಂಡಿವೆ. ಆದರೂ, ರೈತರ, ಕಾರ್ಮಿಕರ, ಕೃಷಿ ಕಾರ್ಮಿಕರ, ನೌಕರರ, ವಿದ್ಯಾರ್ಥಿ ಯುವಜನರ, ಜನಸಾಮಾನ್ಯರ ಹೋರಾಟಗಳು ತೀವ್ರವಾದಂತೆ, ರಾಜ್ಯಸರಕಾರಗಳು ತಮ್ಮನ್ನು ಅಧಿಕಾರಕ್ಕೆ ಏರಿಸಿದ ಮತದಾರರ ಜನಪ್ರಿಯತೆಯನ್ನು ಉಳಿಸಿಕೊಳ್ಳಲು ಈ ವಿವಿಧ ವರ್ಗಗಳಿಗೆ ಅಲ್ಪಸ್ವಲ್ಪವಾದರೂ ಪರಿಹಾರಗಳನ್ನು ಕೊಡಬೇಕಾಗುವುದು. ಮುಖ್ಯವಾಗಿ, ರಾಷ್ಟ್ರೀಯ ವಿರೋಧ ಪಕ್ಷಗಳು ಕೆಲವು ರಾಜ್ಯಗಳಲ್ಲಿ ಆಡಳಿತ ವಹಿಸಿಕೊಂಡಾಗ ಮತದಾರರಿಗೆ ತಾವು ನೀಡಿದ ಆಶ್ವಾಸನೆಗಳನ್ನು ಈಡೇರಿಸಲು ತಮ್ಮದೇ ಆದ ವಿಶಿಷ್ಟ ಆರ್ಥಿಕ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಬೇಕಾಗುವುದು. ಆದರೆ, ಆರ್ಥಿಕ ತುರ್ತು ಪರಿಸ್ಥಿತಿಯನ್ನು ಹೇರಿದಾಗ, ರಾಜ್ಯಸರಕಾರಗಳು ಆರ್ಥಿಕ ವಿಷಯಗಳಲ್ಲಿ ಸಂಪೂರ್ಣ ನಿಷ್ಕ್ರಿಯವಾಗಿ ಕೇಂದ್ರದ ಕೈಗೊಂಬೆಗಳಾಗಿರಬೇಕಾಗುವುದು.

ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳ ಎಡರಂಗ ಸರಕಾರಗಳು ಮತ್ತು ಕೇರಳ ರಾಜ್ಯದ ಎಡ ಹಾಗೂ ಪ್ರಜಾಪ್ರಭುತ್ವವಾದಿ ರಂಗ ಸರಕಾರವು ಅನೇಕ ಪರಿಹಾರ ಕಾರ್ಯಗಳನ್ನೂ ಅಭಿವೃದ್ಧಿಯೋಜನೆಗಳನ್ನೂ ಕೈಗೊಂಡಿವೆ. ಉದಾ : ನಿರುದ್ಯೋಗಸ್ಥರಿಗೆ ನಿರುದ್ಯೋಗ ಭತ್ತೆ, 'ಕೆಲಸಕ್ಕೆ-ಕಾಳು' ಯೋಜನೆಯಲ್ಲಿ ಗ್ರಾಮೀಣ ಕಾರ್ಮಿಕರಿಗೆ ಉದ್ಯೋಗ, ಸಣ್ಣ ಹಿಡುವಳಿದಾರರಿಗೆ ಭೂ ಕಂದಾಯ ರದ್ಧತಿ, ಬಡರೈತರಿಗೆ ಉದಾರ ಸಾಲ ಸೌಲಭ್ಯಗಳು, ಕೃಷಿಕಾರ್ಮಿಕರಿಗೆ ಕನಿಷ್ಟ ವೇತನ ಹಾಗೂ ವೃದ್ಧಾಪ್ಯ ವೇತನ, ಬಡಜನರಿಗೆ ಅಗ್ಗದಲ್ಲಿ ಜೀವನಾವಶ್ಯಕ ವಸ್ತುಗಳು, ಕಟ್ಟುನಿಟ್ಟಾಗಿ ಭೂ ಸುಧಾರಣಾ ಮಸೂದೆಯ ಕಾರ್ಯಾಚರಣೆ, ಕೆಳಹಂತದಲ್ಲಿ ಕಡ್ಡಾಯ ಶಿಕ್ಷಣ, ರಾಜ್ಯಗಳ ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆಗಳಿಗೆ ಯೋಗ್ಯಬೆಲೆ ಮತ್ತು ಸಾಕಷ್ಟು ಮಾರುಕಟ್ಟೆ, ರೈತರ, ಕಾರ್ಮಿಕರ, ನೌಕರರ, ವಿದ್ಯಾರ್ಥಿ ಯುವಜನರ, ಮಹಿಳೆಯರ, ಪೋಲೀಸರ ಸಂಘಟನೆಗಳಿಗೆ ಮತ್ತು ಅವುಗಳ ಪ್ರಜಾಸತ್ತಾತ್ಮಕ ಹೋರಾಟಗಳಿಗೆ ಬೆಂಬಲ, ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆಗಾಗಿ ಹೋರಾಟಕ್ಕೆ ಬೆಂಬಲ. ಆರ್ಥಿಕ ತುರ್ತು ಪರಿಸ್ಥಿತಿಯು ಬಂದಲ್ಲಿ, ಇಂದಿರಾ ಕಾಂಗ್ರೆಸ್ ಅಧಿಕಾರದಲ್ಲಿರುವ ಕೇಂದ್ರ ಸರಕಾರ ಈ ಯಾವ ಕಾರ್ಯಕ್ರಮಗಳಿಗೂ ಆರ್ಥಿಕ ಬೆಂಬಲ ಕೊಡಲಾರದು. ಅವುಗಳೆಲ್ಲಾ ದುಂದುವೆಚ್ಚವೆಂದು ಸಾಲ, ನೆರವುಗಳನ್ನು ತಡೆಹಿಡಿದೀತು, ಅಲ್ಲದೆ, ಈ ರಾಜ್ಯಗಳು ಕೇಂದ್ರಕ್ಕೆ ಸಲ್ಲಿಸಬೇಕಾದ ಸಾಲವನ್ನು ಕೂಡಲೇ ಮರುಪಾವತಿ ಮಾಡಬೇಕೆಂದೂ ಹೊಸ ಸಾಲ ನೆರವು ಸಿಗಲಾರದೆಂದೂ ಒತ್ತಾಯಿಸಲಾದೀತು, ಬೆದರಿಕೆ ಹಾಕಲಾದೀತು. ಮೂವತ್ತು ವರ್ಷಗಳ ಕಾಂಗ್ರೆಸ್ ಆಡಳಿತ ಹಾಗೂ ಮೂರು ವರ್ಷಗಳ ಜನತಾ ಆಡಳಿತದಲ್ಲಿ ಸಾಧಿಸಲಾಗದ ಕೆಲವು ಮಹತ್ವದ ಸಾಧನೆಗಳು ಪ. ಬಂಗಾಳ, ತ್ರಿಪುರಾ, ರಾಜ್ಯಗಳಲ್ಲಿ ಕಳೆದ ಮೂರು ವರ್ಷಗಳಿಂದ ಮತ್ತು ಕೇರಳ ರಾಜ್ಯದಲ್ಲಿ ಈ ವರ್ಷದಲ್ಲಿ ನಡೆದಿರುವುದು, ಇಂದಿರಾ ಕಾಂಗ್ರೆಸ್ ಕೇಂದ್ರ ಸರಕಾರಕ್ಕೂ ರಾಜ್ಯಸರಕಾರಗಳಿಗೂ ಸಹಿಸಲಾರದಾಗಿವೆ!

ಹಾಗಾದರೆ ದೇಶದಲ್ಲಿನ ಸದ್ಯದ ಆರ್ಥಿಕ ದುಃಸ್ಥಿತಿಯನ್ನು ಎದುರಿಸುವುದು ಹೇಗೆ? ರಾಜ್ಯಗಳ ಸ್ವಾಯತ್ತತೆಯನ್ನು ಮೊಟಕುಗೊಳಿಸದೆ, ಕಾರ್ಮಿಕರ, ನೌಕರರ ಸಂಬಳ ಸೌಲಭ್ಯಗಳನ್ನು ಸ್ಥಗಿತಗೊಳಿಸದೆ, ಕಡಿಮೆಗೊಳಿಸದೆ, ಪರ್ಯಾಯ ತುರ್ತು ಕ್ರಮಗಳನ್ನು ಕೈಕೊಳ್ಳಬೇಕು.

(7ನೇ ಪುಟ ನೋಡಿ)

ಚಳುವಳಿಕಾರರ ಹಲ್ಲೆಗಳನ್ನು ಎದುರಿಸಿದ ಅಸ್ಸಾಂ ಕಾರ್ಯಕರ್ತರು

ಸಿ.ಐ.ಟಿ.ಯು ನ ಅಸ್ಸಾಂ ರಾಜ್ಯ ಸಮಿತಿಯು ಆಗಸ್ಟ್ 15ರಂದು ಗೌಹಾಟಿಯಲ್ಲಿ ಸಭೆ ಸೇರಿತ್ತು. ಅದರ ಅಧ್ಯಕ್ಷ ಸುರೇನ್ ಹಜಾರಿಕಾ ಅಧ್ಯಕ್ಷತೆ ವಹಿಸಿದ್ದರು.

ಸಭೆಯು ಸಿ.ಐ.ಟಿ.ಯು. ನಾಯಕರಾದ ದಿನೇನ್ ಭಟ್ಟಾಚಾರ್ಯ ಮತ್ತು ತರುಣ್‌ಸೇನ್ ಗುಪ್ತ ಅವರ ನಿಧನಕ್ಕೆ ಸಂತಾಪ ಸೂಚಿಸಿತು. ಎಸ್.ಎಫ್.ಐ.ನ ಮದರ್ ದೇಕ, ಕಿಸಾನ್ ಸಭೆಯ ಮಥಾಬ್ ಬರ್ಮನ್ ಮತ್ತು ಮೋಟಾರ್ ಕಾರ್ಮಿಕರಾದ ಪೊವಾಲಿ ಅಗರ್‌ವಾಲ, ಬಾದಲ್ ಸಹಾ ಅವರ ಕಗ್ಗೊಲೆಗಳನ್ನು ಖಂಡಿಸಿ, ಕೊಲೆಗಾರರಿಗೆ ಉಗ್ರಶಿಕ್ಷೆ ಮತ್ತು ಸತ್ತವರ ಕುಟುಂಬಗಳಿಗೆ ಪರಿಹಾರ ನೀಡಬೇಕೆಂದು ಒತ್ತಾಯಿಸಿತು.

ರಾಜ್ಯ ಸಿ. ಐ. ಟಿ. ಯು. ನ ಉಪಾಧ್ಯಕ್ಷ ಅಜಿಂತ್ಯ ಭಟ್ಟಾಚಾರ್ಯ ಅವರು ಸಭೆಯನ್ನು ಉದ್ಘಾಟಿಸಿ, ದೇಶದ ರಾಜಕೀಯ-ಆರ್ಥಿಕ ಪರಿಸ್ಥಿತಿ ಮತ್ತು ಅಸ್ಸಾಂ ಚಳುವಳಿಯ ಸ್ವರೂಪಗಳನ್ನು ಕಾರ್ಮಿಕವರ್ಗದ ಹೋರಾಟಗಳ ಹಿನ್ನೆಲೆಯಲ್ಲಿ ವಿವರಿಸಿದರು.

ಈ ಚಳುವಳಿಯು ಮಧ್ಯಮವರ್ಗದ ನೌಕರರ ಸಂಘಟನೆಗಳ ಮೇಲೆ ಪರಿಣಾಮ ಬೀರಿದ್ದರೂ, ಕೈಗಾರಿಕಾ ಕಾರ್ಮಿಕರನ್ನು ಒಡೆಯಲು ಅದರಿಂದ ಸಾಧ್ಯವಾಗಲಿಲ್ಲ ಎಂದು ರಾಜ್ಯ ಕಾರ್ಯದರ್ಶಿ ಅಮಲ್‌ಘೋಷ್ ದಸ್ತಿದಾರ್ ಹೇಳಿದರು. ವೀರೋಚಿತವಾಗಿ ಎಲ್ಲ ಬಗೆಯ ಹಲ್ಲೆಗಳನ್ನು ಎದುರಿಸಿ, ಸಿ. ಐ. ಟಿ. ಯು. ಬಾವುಟವನ್ನು ಎತ್ತಿಹಿಡಿದ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಲಾಯಿತು.

ಈ ಅನನುಕೂಲಕರ ಪರಿಸ್ಥಿತಿಯೊಳಗೂ ಸಿ. ಐ. ಟಿ. ಯು. ಸಂಘಗಳು ತಮ್ಮ ಕಾರ್ಖಾನೆಗಳಲ್ಲಿ ಹಲವಾರು ಚಳುವಳಿಗಳನ್ನು ನಡೆಸಿ, ಗಮನಾರ್ಹ ಗೆಲುವುಗಳನ್ನು ಸಾಧಿಸಿದ್ದಾರೆ. ಅವರು ವೇತನ ಒಪ್ಪಂದಗಳನ್ನು ಸಾಧಿಸಿ, ಹಿಂದಿನ ವರ್ಷಕ್ಕಿಂತ ಹೆಚ್ಚು ಬೋನಸ್ ಪಡೆದಿದ್ದಾರೆ. ಸಿ. ಐ. ಟಿ. ಯು. ಕರೆಕೊಟ್ಟದ್ದ ಹಾಗೆ ಏಪ್ರಿಲ್ 21ರಂದು ರಾಜ್ಯದಾದ್ಯಂತ ಬೇಡಿಕೆ ದಿನವನ್ನು ಆಚರಿಸಿದ್ದಾರೆ.

ಅಸ್ಸಾಂ ಚಳುವಳಿಕಾರರು ಮೇ ಒಂದರಂದು "ಬಿಳಿ ಬಾವುಟದ ದಿನ"ವನ್ನಾಗಿ ಆಚರಿಸಿ, ಸಿ. ಐ. ಟಿ. ಯು. ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ್ದರೂ ಅನೇಕ ಕಡೆಗಳಲ್ಲಿ ಕೈಗಾರಿಕಾ ಕಾರ್ಮಿಕರು ಮೇ ದಿನ ಆಚರಿಸಿ ಕೆಲಸಗಳಿಗೆ ಗೈರುಹಾಜರಾಗಿದ್ದಾರೆ. ಮೇ ದಿನ ಆಚರಿಸಿದ್ದಕ್ಕಾಗಿ ಟ್ರೇಡ್ ಯೂನಿಯನ್ ನಾಯಕರಿಗೆ ಹೊಡೆಯಲಾಗಿದೆ. ಸಿಲ್‌ಘಾಟ್ ಜೂಟ್ ಮಿಲ್ಸ್‌ನ ಸಂಘದ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಏಳು ಕಾರ್ಮಿಕರಿಗೆ ವಿಪರೀತ ಹೊಡೆತ ಬಿದ್ದು ಆಸ್ಪತ್ರೆಗೆ ಸೇರಿಸಬೇಕಾಗಿತ್ತು.

ಅಸ್ಸಾಂ ಚಳುವಳಿಯ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ಪ್ಲೈಉಡ್ ಕೈಗಾರಿಕೆ, ಅಸ್ಸಾಂ ಸಹಕಾರಿ ಸೆಣಬು ಗಿರಣಿ ಮತ್ತು ಬಿಲ್ಡ್‌ವರ್ತ್‌ನ ಆಡಳಿತವರ್ಗ ನೂರಾರು ಕೆಲಸಗಾರರನ್ನು, ಅದರಲ್ಲೂ ಅಲ್ಪಸಂಖ್ಯಾತ ಕೋಮಿನ 200 ಕೆಲಸಗಾರರನ್ನು ವಜಾಮಾಡಿ, ಹಳೆವೇತನ ಒಪ್ಪಂದ ಮುಗಿದ ನಂತರದ ಹೊಸ ವೇತನಗಳನ್ನು ಕೊಡದೆ, ಸಿ. ಐ. ಟಿ. ಯು. ಸಂಘಗಳಿಗೆ ಮನ್ನಣೆ ಹಿಂತೆಗೆದುಕೊಂಡಿವೆ.

ಈ ಅವಧಿಯ ಒಂದು ಗಮನಾರ್ಹ ಬೆಳವಣಿಗೆ ಎಂದರೆ ಇಂಟಕ್‌ಗೆ ಸೇರಿದ್ದ ನಾಲ್ಕು ಚಹತೋಟಗಳ ಸಂಘಗಳು ಅದನ್ನು ಬಿಟ್ಟು ಸಿ.ಐ.ಟಿ.ಯು.ಗೆ ಸೇರ್ಪಡೆಯಾಗಿವೆ.

ರಾಜ್ಯದ ಚಳುವಳಿಯ ಬಗ್ಗೆ ಸಿ ಐ ಟಿ. ಯು. ನ ನಿಲುವನ್ನು ವಿವರಿಸುವ ಒಂದು ಗೊತ್ತುವಳಿಯನ್ನು ರಾಜ್ಯಸಮಿತಿ ಸ್ವೀಕರಿಸಿದೆ.

ಇನ್ನೊಂದು ಗೊತ್ತುವಳಿಯಲ್ಲಿ ಸಮಿತಿಯು, ಸಿಲ್‌ಘಾಟ್ ಸೆಣಬು ಮತ್ತು ಬಿಲ್ಡ್‌ವರ್ತ್ ಕಾರ್ಮಿಕರ ಮೇಲಿನ ಹಲ್ಲೆಗಳನ್ನು ಖಂಡಿಸಿದೆ. ಇಂಜಿನಿಯರಿಂಗ್ ಮತ್ತು ಪ್ಲೈಉಡ್ ಕಾರ್ಮಿಕರಿಗೆ ಹೊಸ ವೇತನ ನೀಡಬೇಕೆಂದು ಒತ್ತಾಯಿಸಿದೆ. ಪ್ಲೈಉಡ್ ದಿಗ್ಬಂಧನವನ್ನು ಎತ್ತಬೇಕು, ಕಳೆದ ಒಂದು ವರ್ಷದಲ್ಲಿ ವಜಾ ಆದ ಕಾರ್ಮಿಕರ ಪುನರ್ ನೇಮಕ ಆಗಬೇಕು. ಪ್ಲಾಂಟೇಷನ್ ಕೆಲಸಗಾರರ ವೇತನ ಮಂಡಲಿಯಲ್ಲಿ ಸಿ. ಐ. ಟಿ. ಯು. ವನ್ನೂ ಸೇರಿಸಬೇಕು ಎಂದು ಒತ್ತಾಯಿಸಿದೆ.

ಸಿ. ಐ. ಟಿ. ಯು ನ ರಾಜ್ಯ ಮಂಡಲಿ ಸಭೆಯನ್ನು ನಡೆಸಲು, ಚಹ ಮತ್ತು ಮೋಟಾರ್ ಕೆಲಸಗಾರರ ಎರಡು ವಿಶೇಷ ಸಮ್ಮೇಳನಗಳನ್ನು ನಡೆಸಲು, ತನ್ನ ವಾರ್ತಾ ಪತ್ರವನ್ನು ಮತ್ತೆ ಆರಂಭಿಸಲು ಮತ್ತು ಅಖಿಲ ಭಾರತ ಸೆಣಬು ಕಾರ್ಮಿಕರ ಸಮ್ಮೇಳನಕ್ಕೆ ತನ್ನ ಪ್ರತಿನಿಧಿಗಳನ್ನು ಕಳಿಸಲು ಸಭೆ ತೀರ್ಮಾನಿಸಿದೆ.

ಸಿ. ಐ. ಟಿ. ಯು. ಸಂಘಗಳನ್ನು ಬಲಪಡಿಸಲು, ಅದರ ಸದಸ್ಯತ್ವವನ್ನು ಹೆಚ್ಚಿಸಲು ಮತ್ತು ಬರುವ ದಿನಗಳಲ್ಲಿ ಅದು ತನ್ನ ಪಾತ್ರವನ್ನು ವಹಿಸುವಂತೆ ಸಿದ್ಧಮಾಡಲು ಸಭೆ ಕರೆಕೊಟ್ಟಿದೆ.

●

ಐಕ್ಯ ಚಳುವಳಿಗೆ ಆರು ಪಕ್ಷಗಳ ಕರೆ

ಆಗಸ್ಟ್ 27ರಂದು ನವದೆಹಲಿಯಲ್ಲಿ ಸೇರಿದ್ದ ಲೋಕದಳ, ಸಿ.ಪಿ.ಐ.(ಎಂ), ಸಿ. ಪಿ. ಐ., ಕಾಂಗ್ರೆಸ್ (ಯು), ಫಾರ್ವರ್ಡ್ ಬ್ಲಾಕ್ ಮತ್ತು ಆರ್.ಎಸ್.ಪಿ. ಪಕ್ಷಗಳ ಪ್ರತಿನಿಧಿಗಳು ಹೆಚ್ಚುತ್ತಿರುವ ಹಣದುಬ್ಬರ ಮತ್ತು ಕೃಷಿಕಾರ್ಮಿಕರ, ರೈತರ, ಕೈಗಾರಿಕಾ ಕಾರ್ಮಿಕರ, ಕುಶಲ ಕರ್ಮಿಗಳ, ಇತರ ದುಡಿಯುವ ಜನತೆಯ ನಿಜವೇತನಗಳಿಗೆ ಪೆಟ್ಟುಕೊಡುವ ಬೆಲೆಏರಿಕೆಯ ಪರಿಸ್ಥಿತಿಯನ್ನು ಕುರಿತು ಚರ್ಚಿಸಿದರು.

ಕುಸಿಯುತ್ತಿರುವ ಕಾನೂನು ಮತ್ತು ಶಿಸ್ತು ಪರಿಸ್ಥಿತಿ, ಅದರಲ್ಲೂ ಕೋಮು ಸೌಹಾರ್ದ ಮತ್ತು ಶಾಂತಿ, ಮಹಿಳೆಯರ ಮತ್ತು ಇತರ ದುರ್ಬಲ ವರ್ಗಗಳ ಗೌರವ ಮತ್ತು ಜೀವಗಳು ಮುಂತಾದುವನ್ನು ಕಾಪಾಡುವುದರಲ್ಲಿ ಸರ್ಕಾರದ ವಿಫಲತೆ ಇವುಗಳನ್ನು ಕುರಿತೂ ಸಭೆ ಚರ್ಚಿಸಿತು.

ಬೆಲೆಗಳು :

ಹೊಸ ಸರ್ಕಾರದ ಸ್ಥಾಪನೆಯಾದ ಮೇಲೆ, ಬೆಲೆಗಳನ್ನು ಇಳಿಸುತ್ತೇವೆ ಎಂಬ ಪ್ರತಿಘೋಷಣೆಯೊಂದಿಗೂ ಬೆಲೆಗಳು ಶರವೇಗದಿಂದ ಏರುತ್ತಿವೆ ಎಂದು ಪ್ರತಿನಿಧಿಗಳು ಅಭಿಪ್ರಾಯಪಟ್ಟರು. ಕೃಷಿ ಉತ್ಪನ್ನಗಳ ಬೆಲೆ ಕುಸಿದಿದೆ, ಆದರೆ ಕೈಗಾರಿಕಾ ವಸ್ತುಗಳು ಕೃಷಿ ಸಹಾಯಕ ವಸ್ತುಗಳು ಮತ್ತಿತರ ಸಾಮಾನ್ಯ ಬಳಕೆಯ ವಸ್ತುಗಳ ಬೆಲೆ ಏರುತ್ತಲೇ ಇದೆ. ಸಿಮೆಂಟ್, ಕಾಗದ, ಸೋಡಾ ಆಶ್, ಉಕ್ಕು ಉತ್ಪನ್ನಗಳು, ಕಲ್ಲಿದ್ದಲು ಮುಂತಾದವುಗಳ ಸಿಕ್ಕಾಪಟ್ಟೆ ಅಕ್ರಮ ದಾಸ್ತಾನು, ಲಾಭಕೋರತನ ಮತ್ತು ಕಾಳಸಂತೆಯಿಂದ ಪರಿಸ್ಥಿತಿ ಉಲ್ಬಣಗೊಂಡಿದೆ. ಹಳೆ ಸರ್ಕಾರಗಳ ನೀತಿಗಳಿಂದ ಬೆಲೆ ಏರುತ್ತಿದೆಯೆಂಬ ಇಂದಿರಾಗಾಂಧಿಯವರ ನೆಪ ಯಾರನ್ನೂ ತೃಪ್ತಿಗೊಳಿಸುವುದಿಲ್ಲ. ಬೆಲೆಯುತ್ತಿರುವ ಅಸಮಾಧಾನವು ದೇಶದಲ್ಲೆಲ್ಲಾ ಏರುತ್ತಿರುವ ಜನತೆಯ ಚಟುವಟಿಕೆಯಿಂದ ಗೊತ್ತಾಗುತ್ತದೆ. ಈ ಚಟುವಟಿಕೆಗಳನ್ನು ಒಂದುಗೂಡಿಸಿ, ಸರಿಯಾದ ನಿರ್ದೇಶನವನ್ನು ಕೊಡಬೇಕಾಗಿದೆ.

ಈ ಕೆಳಕಂಡ ಬೇಡಿಕೆಗಳ ಬಗ್ಗೆ ಎಲ್ಲರದಾದ ಒಂದು ಚಳುವಳಿಯನ್ನು ಬೆಳೆಸಲು ಪ್ರತಿನಿಧಿಗಳು ನಿರ್ಧರಿಸಿದ್ದಾರೆ.

1) ಜನತೆಗೆ ಎಟುಕುವಂಥ ಮಟ್ಟಕ್ಕೆ ಅಗತ್ಯವಸ್ತುಗಳ ಬೆಲೆಯನ್ನು ಇಳಿಸಬೇಕು.

2) ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಿ, ಗ್ರಾಮೀಣ ಪ್ರದೇಶಗಳಿಗೂ ಅದನ್ನು ವಿಸ್ತರಿಸಬೇಕು. ಇದರಲ್ಲಿ ಆಹಾರಧಾನ್ಯಗಳು, ಕಾಳುಗಳು, ಸಕ್ಕರೆ, ಖಾದ್ಯ ತೈಲಗಳು, ಬಟ್ಟೆ, ಸೀಮೆಎಣ್ಣೆ ಮತ್ತು ಅಗತ್ಯ ಔಷಧಿಗಳು ಸೇರಿರಬೇಕು. ಈ ಉದ್ದೇಶಕ್ಕಾಗಿ ಬೇಕಾದ ದಾಸ್ತಾನನ್ನು ಸರ್ಕಾರ ಖರೀದಿಸಬೇಕು.

3. ಸರ್ಕಾರಿ ಏಜೆನ್ಸಿಗಳಾದ, ಜೆ. ಸಿ. ಐ., ಸಿ. ಸಿ. ಐ., ಎಫ್. ಸಿ. ಐ. ಗಳು ಮಾರುಕಟ್ಟೆಯನ್ನು ಪ್ರವೇಶಿಸಿ, ರೈತರಿಗೆ ಅವರ ಉತ್ಪನ್ನಕ್ಕೆ ಉತ್ತೇಜಕರ ಬೆಲೆಗಳು ಸಿಗುವಂತಾಗಬೇಕು. ಈ ಏಜೆನ್ಸಿಗಳಿಗೆ ಅಗತ್ಯವಾದ ಹಣಕಾಸನ್ನು ಕೊಡಬೇಕು. ಕೃಷಿ ಸಹಾಯಕವಸ್ತುಗಳ ಬೆಲೆ ಮತ್ತು ಉತ್ಪಾದನಾ ವೆಚ್ಚದ ಏರಿಕೆಯನ್ನು ಗಮನದಲ್ಲಿರಿಸಿಕೊಂಡು ವಾಸ್ತವ ಬೆಂಬಲ ಬೆಲೆಯನ್ನು ಘೋಷಿಸಬೇಕು.

ಕೋಮು ಗಲಭೆ ಮತ್ತು ಅಶಾಂತಿಗಳು, ಸ್ವಾತಂತ್ರ್ಯ, ಚಳುವಳಿಯ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಮೌಲ್ಯಗಳನ್ನು ಧಿಕ್ಕರಿಸಿದಂತೆ ಎಂದು ಪ್ರತಿನಿಧಿಗಳು ಅಭಿಪ್ರಾಯ ಪಟ್ಟರು. ಮೂಲಭೂತ ಸಾಮಾಜಿಕ-ಆರ್ಥಿಕ ಸಮಸ್ಯೆಗಳಿಂದ ಜನತೆಯ ಗಮನವನ್ನು ಬೇರೆಡೆಗೆ ಸೆಳೆಯಲು ಮತ್ತು ಜನಪ್ರಿಯ ಚಳುವಳಿಗಳನ್ನು ದುರ್ಬಲಗೊಳಿಸಲು ಅವು ಉದ್ದೇಶಿಸಿವೆ. ಶಾಂತಿಸಮಿತಿಗಳು, ಶಾಂತಿಜಾಥಾಗಳು ಮತ್ತಿತರ ಅಗತ್ಯ ಕ್ರಮಗಳನ್ನು ಕೈಗೊಂಡು ಈ ಕೋಮು ಶಕ್ತಿಗಳನ್ನು ಎದುರಿಸಲು ಒಗ್ಗಟ್ಟಾಗಲು ಪ್ರತಿನಿಧಿಗಳು ಎಲ್ಲ ಕೋಮುಗಳಲ್ಲಿ ಮನವಿ ಮಾಡಿದರು.

ಪತ್ರಿಕಾ ಸ್ವಾತಂತ್ರ್ಯದ ಮೇಲಿನ ಹಲ್ಲೆಗಳು, ಸ್ಥಾನಬದ್ಧತೆಯ ಪುನಶ್ಚೇತನ, ಮತ್ತು ಇತರ ದಬ್ಬಾಳಿಕೆ ಕಾನೂನುಗಳ ಜಾರಿಯನ್ನು ಪ್ರತಿನಿಧಿಗಳು ಖಂಡಿಸಿದರು.

ಈ ವಿಚಾರಗಳ ಬಗ್ಗೆ ಜನಪ್ರಿಯ ಹೋರಾಟಗಳನ್ನು ನಡೆಸಲು ಒಂದು ಸಮನ್ವಯ ಸಮಿತಿಯನ್ನು ರಚಿಸಲು ಪ್ರತಿನಿಧಿಗಳು ನಿರ್ಧರಿಸಿದರು. (ಪತ್ರಿಕಾ ವರದಿ ಪ್ರಕಾರ ಕಾಂ. ಇ. ಎಂ. ಎಸ್. ನಂಬೂದಿರಿಪಾದ್ ಅವರು ಸಂಚಾಲಕರಾಗಿರುವ ಸಮಿತಿಯನ್ನು ರಚಿಸಲಾಗಿದೆ.)

●

ಬೆಲೆ ಏರಿಕೆ ವಿರುದ್ಧ ರೈತ ಕೂಲಿಗಾರರ ಪ್ರದರ್ಶನ

ಧಾರವಾಡ ಜಿಲ್ಲೆಯ ಅಕ್ಕಿಆಲೂರಿನಲ್ಲಿ ತಾಲ್ಲೂಕು ಮಾರುಕಟ್ಟೆಯ ಸೊಸೈಟಿಯ ಎದುರು, ತಾಲ್ಲೂಕಿನ ಮೂರು ಸಾವಿರಕ್ಕೂ ಮೀರಿದ ರೈತ ಕೂಲಿಕಾರರು ಬೆಲೆ ಏರಿಕೆ ನಿಲ್ಲಿಸಿ, ಚಿಕ್ಕ ಹಿಡುವಳಿದಾರರ ಸಾಲ ರದ್ದು, ಬೆಟರ್‌ಮೆಂಟ್ ಲೆವಿ ನಿಲ್ಲಿಸಿ, ರೈತರ ಮೇಲಿನ ಮೊಕದ್ದಮೆಗಳ ವಾಪಸಾತಿ ಮುಂತಾದ ಬೇಡಿಕೆಗಳನ್ನು ಒತ್ತಾಯಿಸಲು ಮೌನಪ್ರದರ್ಶನ ನಡೆಸಿದರು. ಅನೇಕ ಫಲಕಗಳನ್ನು ಹೊತ್ತ ರೈತರು ಘೋಷಣೆಗಳನ್ನು ಕೂಗುತ್ತಿದ್ದರು.

ಪ್ರದರ್ಶನವನ್ನು ಸಂಘಟಿಸಿದ ಹಾನಗಲ್ ತಾಲ್ಲೂಕು ರೈತಸಂಘದ ಅಧ್ಯಕ್ಷ ಶ್ರೀ ಫಕೀರಪ್ಪ ಹೋತನಹಳ್ಳಿ ಅವರು ಸೊಸೈಟಿ ಮತ್ತು ಅಸಿಸ್ಟೆಂಟ್ ಕಮೀಷನರಿಗೆ ಮನವಿ ಪತ್ರ ಸಲ್ಲಿಸಿದರು. ಅಲ್ಲದೆ ಅಸಿಸ್ಟೆಂಟ್ ಕಮೀಷನರಿಗೆ ಸಲ್ಲಿಸಿದ ವಿಶೇಷ ಮನವಿಗೆ ಎಂ.ಎಸ್. ಧಾರೇಶ್ವರ, ಕೆ. ಮೌಲಾನಾ ಕರ್ನಾಟಕ ಹಾನಗಲ್ಲ, ಡಾ. ಸ್ವಾಮಿ ನೀಲಾನಂದ ಹಾನಗಲ್ಲ ಇವರು ರುಜುಮಾಡಿದ್ದರು.

ಜೋಡುಕುದುರೆಯನ್ನು ಮುಂದಿಟ್ಟುಕೊಂಡು, ಕೆಂಬಾವುಟಗಳನ್ನು ಹಿಡಿದು ಮೆರವಣಿಗೆ ಹೊರಟಿತು. ನಂತರ ಫಕೀರಪ್ಪ ಹೋತನಹಳ್ಳಿ ಅವರ ಅಧ್ಯಕ್ಷತೆಯಲ್ಲಿ ಎಸ್. ಜಿ. ಸಾಲಿಮಠ ಅವರ "ಕೆಂಪು ಬಾವುಟ" ಕ್ರಾಂತಿಗೀತೆಯೊಂದಿಗೆ ಬಹಿರಂಗ ಸಭೆ ಆರಂಭವಾಯಿತು. ಸಭೆಯಲ್ಲಿ ಎಂ.ಎಸ್. ಧಾರೇಶ್ವರ, ಡಾ॥ ನೀಲಾನಂದ, ಜಿನ್ನಾಸಾಬ ಮಶಾನದಾರ, ಕೆ. ಮೌಲಾನ ಕರ್ನಾಟಕಿ ಮಲ್ಲಪ್ಪ ಗಡಿಯಣ್ಣನವರ, ದ್ಯಾಮಣ್ಣ ಕೊಡಿಕೊಪ್ಪ, ಎಚ್.ಎ ನಾಮಧಾರಿ ಹ.ಸೇನಮಿಯಾ, ಸುರುಳೇಶ್ವರ ಮುಂತಾದವರು ಮಾತನಾಡಿದರು. ಖಾದರ ಸಾಬ ಬಾಳಾಗ್ಗರ ಇವರು ವಂದಿಸಿದರು.

○

ಐಕ್ಯರಂಗಕ್ಕೆ

ಚಂದಾದಾರರಾಗಿರಿ

"ಯೋಜನೆಗಳು ಸಂಪತ್ತನ್ನು ಒಂದೇ ಕಡೆ ಸೇರಿಸುತ್ತಿವೆ"

ರಾಜ್ಯಸಭೆಯಲ್ಲಿ ಕಾಂ. ರಾಮಮೂರ್ತಿ ಭಾಷಣ

ರಾಜ್ಯಸಭೆಯ ಸದಸ್ಯರಾದ ಕಾಂ. ಪಿ ರಾಮಮೂರ್ತಿ ಅವರು ಜುಲೈ 31ರಂದು, ಯೋಜನಾ ಸಚಿವಾಲಯದ ಕಾರ್ಯರೀತಿಯ ಬಗ್ಗೆ ನಡೆದ ಚರ್ಚೆಯಲ್ಲಿ ಮಾಡಿದ ಭಾಷಣದ ಸಾರಾಂಶ ಇದು:

ಯೋಜನಾ ಸಚಿವಾಲಯದ ಕಾರ್ಯರೀತಿಯ ಬಗ್ಗೆ ನಡೆಯುವ ಈ ಚರ್ಚೆಯಲ್ಲಿ ಯೋಜನಾ ಪ್ರಕ್ರಿಯೆಯ ಬಗ್ಗೆಯೇ ಹಲವು ಮೂಲಭೂತ ಪ್ರಶ್ನೆಗಳು ಏಳುತ್ತವೆ. ಯೋಜನೆಯ ಉದ್ದೇಶ ಸಂಪತ್ತಿನಲ್ಲಿ ಆದಾಯದಲ್ಲಿ ವ್ಯತ್ಯಾಸಗಳನ್ನು ಕಡಿಮೆ ಮಾಡುವುದು, ಸಂಪತ್ತು ಒಂದೇ ಕಡೆ ಸೇರುವುದನ್ನು ಕಡಿಮೆ ಮಾಡುವುದು ಮತ್ತು ಸ್ವ-ಉತ್ಪಾದಕ ಆರ್ಥಿಕತೆಯನ್ನು ಕಟ್ಟುವುದು-ಎಂದೆಲ್ಲಾ ಇದೆ, ವರ್ಷದಿಂದ ವರ್ಷಕ್ಕೆ ರೂಪಿಸಿಕೊಂಡ ಮೊದಲ ಗುರಿ ಇದೇ. ಐದು ಯೋಜನೆಗಳು ಮುಗಿದಿವೆ, ಆದರೆ ಈ ಐದೂ ಯೋಜನೆಗಳು ಸಂಪತ್ತು ಒಂದೇ ಕಡೆ ಸೇರುವುದನ್ನು ಹೆಚ್ಚಿಸಿವೆ ಮತ್ತು ಇಡೀ ದೇಶದಲ್ಲಿ ಆದಾಯ ಮತ್ತು ಸಂಪತ್ತಿನ ಅಂತರಗಳು ವ್ಯತ್ಯಾಸಗಳನ್ನು ಹೆಚ್ಚು ಮಾಡಿವೆ ನಿರುದ್ಯೋಗ ಕಡಿಮೆ ಮಾಡುವುದರ ಬಗ್ಗೆ, ಸಾಮಾನ್ಯ ಜನತೆಯ ಜೀವನಮಟ್ಟ ಹೆಚ್ಚಿಸುವುದರ ಬಗ್ಗೆ ನೀವು ದೊಡ್ಡ ಗಂಟಲಲ್ಲಿ ಸಾರಿದ್ದೀರಿ. ಯೋಜನೆ ಒಂದಾದ ಮೇಲೆ ಇನ್ನೊಂದರಂತೆ ಎಲ್ಲದರ ದಾಖಲೆಯಲ್ಲೂ ಮೊದಲನೇ ಪ್ಯಾರಾದಲ್ಲೇ ಇವೆಲ್ಲ ಇವೆ. ನನ್ನ ಪ್ರಶ್ನೆ ಇದು: ಎಲ್ಲ ಯೋಜನೆಗಳೂ ಯಾಕೆ ವಿಫಲಗೊಂಡಿವೆ? ನಿಮ್ಮ ಉದ್ದೇಶಗಳೆಂದು ಹೇಳಿಕೊಂಡಿರುವುದಕ್ಕೆ ತದ್ವಿರುದ್ಧವಾದ ಫಲಿತಾಂಶಗಳೇ ಬಂದಿರುವುದು ಯಾಕೆ? ಈ ಬಗ್ಗೆ ಏನಾದರೂ ಆಲೋಚನೆ ನಡೆದಿದೆಯೇ? ಯೋಜನಾ ಆಯೋಗ ಮತ್ತು ಯೋಜನಾ ಮಂತ್ರಿ ಇರುವುದರಿಂದ ಏನು ಪ್ರಯೋಜನ?

ಕೈಗಾರಿಕಾ ನೀತಿ ಗೊತ್ತುವಳಿಯನ್ನೇ ತೆಗೆದುಕೊಳ್ಳಿ. ಅದರಲ್ಲಿ "ಈಗ ಎಲ್ಲಕ್ಕಿಂತ ಹೆಚ್ಚು ಬೇಕಾಗಿರುವುದು ಸರಿಯಾದ ನೀತಿಗಳು" ಎಂದಿದೆ ಸರಿಯಾದ ನೀತಿ ಎಂದರೇನು? ಅದು ಯಾರಿಗೂ ಗೊತ್ತಿಲ್ಲ. ಗೊತ್ತುವಳಿಯು ತುಂಬ ಅಸ್ಪಷ್ಟ ಹೇಳಿಕೆಗಳೇ, ನಂತರ "ದೇಶದ ಆರ್ಥಿಕ ಒಳರಚನೆಯ ಆಧಾರಸ್ತಂಭವಾಗಬೇಕೆಂದು ಆಶಿಸಿದ್ದ ಸಾರ್ವಜನಿಕ ವಲಯವು ಈಗ ಶೂನ್ಯವಾಗಿದೆ" ಎಂದಿದೆ. ಮೊದಲಿಂದಲೂ, ನೀವು ಸಾರ್ವಜನಿಕ ವಲಯದ ಬಗ್ಗೆ ಮಾತನಾಡಿದಾಗಲೆಲ್ಲ ನಿಮ್ಮ ನಿಜವಾದ ಉದ್ದೇಶ ಈ ದೇಶದಲ್ಲಿ ಬಂಡವಾಳಶಾಹಿಯನ್ನು ಬೆಳೆಸುವುದು, ದೊಡ್ಡ ಕೈಗಾರಿಕೆ ಮತ್ತು ದೊಡ್ಡ ಕೈಗಾರಿಕಾ ಉದ್ಯಮಿಗಳನ್ನು ಗುತ್ತೇದಾರರನ್ನು ಬೆಳೆಸುವುದು ಎಂದು ನಾವು ಮೊದಲಿಂದಲೂ ಹೇಳುತ್ತಿದ್ದೆವು ಇದನ್ನು ನೀವು ಅಲ್ಲಗಳೆಯುತ್ತಿದ್ದಿರಿ. ಆದರೆ ನಮ್ಮ ಆಪಾದನೆಯನ್ನು ಈಗ ಒಪ್ಪಿಕೊಳ್ಳದೆ ನಿಮಗೆ ಬೇರೆ ದಾರಿಯಿಲ್ಲ. ಏಕೆಂದರೆ ಪರಿಸ್ಥಿತಿಯ ವಾಸ್ತವತೆಯು ಮುಂದೆ ಜನರನ್ನು ಸಮಾಜವಾದದ ಮಾತನಾಡಿ ವಂಚಿಸುವುದಕ್ಕಾಗುವುದಿಲ್ಲ. ಸಾರ್ವಜನಿಕ ವಲಯ ರೂಪುಗೊಂಡಾಗ, ಎರಡನೇ ಪಂಚವಾರ್ಷಿಕ ಯೋಜನೆ ಕರಡಾದಾಗ, ನಮ್ಮ ಆರ್ಥಿಕತೆಯ "ಉನ್ನತ ಹಂತದಲ್ಲಿ" ಸಾರ್ವಜನಿಕ ವಲಯ ಇರುತ್ತದೆ ಎಂದು ಜವಹರಲಾಲ್ ನೆಹರು ಸಾರಿದ್ದರು. ಈಗ ಅಲ್ಲಿಂದ ಆಧಾರ ಸ್ತಂಭಗಳ ಮಟ್ಟಕ್ಕೆ ನೀವು ಬಂದಿದ್ದೀರಿ. ದೊಡ್ಡ ಬಂಡವಾಳಿಗರು ಹಣಹೂಡಲು ಇಷ್ಟಪಡದ ರಸ್ತೆ, ರೈಲು, ವಿದ್ಯುತ್ ಬಂಡವಾಳಶಾಹಿ ಬೆಳೆಸಲು ಅಗತ್ಯವಾದುದನ್ನು ಸಾರ್ವಜನಿಕ ವಲಯ ಪೂರೈಸುತ್ತದೆ ಎಂದಿರಿ. ಯೋಜನೆಯ ಬಗ್ಗೆ, ಸಾರ್ವಜನಿಕ ವಲಯದ ಬಗ್ಗೆ ಮಾತನಾಡುತ್ತೀರಿ. ಅವರಲ್ಲಿ ಮೇಲಿನಿಂದ ಕೆಳಗಿನವರೆಗೆ ಭ್ರಷ್ಟಾಚಾರ ತುಂಬಿದೆ.

ವಿದೇಶಗಳಿಂದ ತಾಂತ್ರಿಕ ಜ್ಞಾನ ಪಡೆಯುವುದು ಅಗತ್ಯ ಎಂದು ನನಗೆ ಗೊತ್ತು ಆದರೆ ಹಿಂದೆ ಪಡೆದ ತಾಂತ್ರಿಕ ಜ್ಞಾನವನ್ನು ಉಪಯೋಗಿಸಿಕೊಳ್ಳಲಾಗಿದೆಯೆ? ನಮ್ಮ ತಂತ್ರಜ್ಞರ, ವಿಜ್ಞಾನಿಗಳ ಪ್ರತಿಭೆಯನ್ನು ನಮ್ಮ ಸ್ವಂತ ತಾಂತ್ರಿಕತೆ ಬೆಳೆಸಿಕೊಳ್ಳುವುದಕ್ಕೆ ಉಪಯೋಗಿಸಲಾಗಿದೆಯೆ? ಉಕ್ಕು, ವಿದ್ಯುತ್, ಸೀಮೆಗೊಬ್ಬರಗಳಲ್ಲಿ ತಾಂತ್ರಿಕತೆ ಅಭಿವೃದ್ಧಿಪಡಿಸಲಾಗಿದೆಯೆ? ನಮ್ಮ ಇಂಜಿನಿಯರ್‌ಗಳು, ತಂತ್ರಜ್ಞರು, ವಿಜ್ಞಾನಿಗಳು ಬೆಳೆಸಿರುವ ತಾಂತ್ರಿಕತೆಯನ್ನು ಉಪಯೋಗಿಸಿಕೊಳ್ಳಲಾಗಿದೆಯೆ? ಅದನ್ನು ಬಳಕೆಗೆ ತರಲಾಗಿದೆಯೆ? ಸಾರ್ವಜನಿಕ ವಲಯ ಉದ್ಯಮಗಳಲ್ಲಿ ಉನ್ನತ ಸ್ಥಾನದಲ್ಲಿರುವವರು ಈ ಅಭಿವೃದ್ಧಿ ಮತ್ತು ಸಂಶೋಧನೆ ಕೆಲಸಗಳನ್ನು ಹೀನಾಯವಾಗಿ ಕಾಣುವ ಉದಾಹರಣೆಗಳಿವೆ ಆದ್ದರಿಂದ ಎಲ್ಲದರ ಪರಿಣಾಮವಾಗಿ ನೀವು ವಿದೇಶಿ ಸಾಲ ಮತ್ತು ವಿದೇಶಿ ತಾಂತ್ರಿಕತೆಯ ಮೇಲೆ ಹೆಚ್ಚು ಹೆಚ್ಚು ಅವಲಂಬಿಸುತ್ತಿದ್ದೀರಿ.

ಎಲ್ಲ ಅಭಿವೃದ್ಧಿಗೂ ನೀವು ವಿದೇಶಿ ಸಾಲಗಳು, ವಿಶ್ವಬ್ಯಾಂಕ್, ಅಂತರರಾಷ್ಟ್ರೀಯ ಹಣಕಾಸು ನಿಧಿಗಳ ಮೇಲೇ ಅವಲಂಬಿತರಾಗುತ್ತೀರಿ. ಅವರು ಹಣಕೊಟ್ಟ ಮೇಲೆ ನೀವು ಯಾವ ದಾರಿಯನ್ನು ಹಿಡಿಯಬೇಕೆಂಬುದನ್ನೂ ಹೇಳುತ್ತಾರೆ. ದೊಡ್ಡ ಉದ್ಯಮಿಗಳಿಗೆ ರಿಯಾಯ್ತಿ ಕೊಡಬೇಕು, ಬಹುದೇಶಿಯ ಸಂಸ್ಥೆಗಳಿಗೆ ಅನುಮತಿ ಕೊಡಬೇಕು ಎಂದೂ ಹೇಳುತ್ತಾರೆ-ನೀವು ಕೊಡುತ್ತೀರಿ.

ಕಾರ್ಮಿಕರು ಭಾಗವಹಿಸಬೇಕು ಎಂದು ನೀವು ಹೇಳುತ್ತೀರಿ. ಆದರೆ ಅವರು ಕೇವಲ ಉತ್ಪಾದನೆಯನ್ನು ಹೆಚ್ಚಿಸುವ ವಿಚಾರದಲ್ಲಿ ಮಾತ್ರ ಭಾಗವಹಿಸುವುದಲ್ಲ. ತಾಂತ್ರಿಕತೆಯ ಆಯ್ಕೆ, ತಾಂತ್ರಿಕ ವಸ್ತುಗಳನ್ನು ಕೊಳ್ಳುವುದು ಇವುಗಳಲ್ಲೂ ಭಾಗವಹಿಸಬೇಕು. ನೀವು ಕಾರ್ಮಿಕರನ್ನು ನಂಬುವುದಿಲ್ಲ ಐ.ಎ.ಎಸ್. ಅಧಿಕಾರಿಗಳನ್ನು ಮಾತ್ರ ನಂಬುತ್ತೀರಿ ಅವರು ಎಲ್ಲ ಸೇವೆಗಳಿಗೂ ಸರಿ ಎಂದುಕೊಳ್ಳುತ್ತೀರಿ. ತೈಲ ಮತ್ತು ನೈಸರ್ಗಿಕ ಅನಿಲ ಸಂಸ್ಥೆಯ ಡೈರೆಕ್ಟರುಗಳ ಮಂಡಲಿಯಲ್ಲಿ ಒಬ್ಬನಾದರೂ ತಂತ್ರಜ್ಞನಿಲ್ಲ. ಪ್ರತಿಯೊಬ್ಬರೂ ಐ.ಎ.ಎಸ್. ಅಧಿಕಾರಿಗಳೇ. ಅವರು ಎಲ್ಲ ಉದ್ಯಮಕ್ಕೂ ಸರಿ ಎಂದು ಹೇಳುತ್ತೀರಿ. ಹಿಂದಿನ ಮಂತ್ರಿಮಂಡಲ ಎಲ್ಲ ಟ್ರೇಡ್‌ಯೂನಿಯನ್‌ಗಳೂ ಸೇರಿ ಕೆಲವು ಕ್ರಮಗಳನ್ನು ಸೂಚಿಸಿ ಎಂದು ಹೇಳಿತ್ತು. ನಾವೆಲ್ಲ ಒಂದು ವರದಿ ಸಲ್ಲಿಸಿದ್ದೆವು ಆ ವರದಿ ಏನಾಯಿತು? ಯೋಜನೆಯ ಮಾತೆಲ್ಲ ಹಗುರವಾದ ಪ್ರಚಾರ ಆಗುತ್ತಿದೆ. ಇಡೀ ಬಂಡವಾಳಶಾಹಿ ಜಗತ್ತು ಬಿಕ್ಕಟ್ಟಿನಲ್ಲಿದೆ. ಮೂರು ವರ್ಷಗಳ ಹಿಂದೆ ವಿಶ್ವಬ್ಯಾಂಕ್, ಈ ದೇಶವು ರಫ್ತು ಉದ್ಯಮಗಳಿಗೆ, ಸಣ್ಣ ಕೈಗಾರಿಕೆಗಳು, ಬಳಕೆ ವಸ್ತುಗಳ ಕೈಗಾರಿಕೆಗಳನ್ನು ಹೂಡಬೇಕೆಂದು ನಿಮಗೆ ಹೇಳಿತ್ತು. ಅದು ನಿಮ್ಮ ನೀತಿಯೇ. ಹೆಚ್ಚು ಹೆಚ್ಚು ರಫ್ತು, ಈ ದೇಶದ ಜನರಿಗೆ ಏನೂ ಬೇಡ. ನೀವು ಅಗ್ಗದ ದುಡಿಮೆಯನ್ನು ಅವರಿಗೆ ಕೊಡುತ್ತೀರಿ. ಮುಂದುವರೆದ ದೇಶಗಳು ಈ ದೇಶದ ಜನರ ಬೆವರು, ಶ್ರಮದ ಮೇಲೆ ಜೀವಿಸಲಿ ನಮ್ಮ ಬುದ್ಧಿಯನ್ನು ಕೂಡ ಶೋಷಿಸುತ್ತಿದ್ದಾರೆ. ಅವರು ವಿದೇಶಿ ಕಂಪನಿಗಳ ಸೇವೆಸಲ್ಲಿಸುತ್ತಿದ್ದಾರೆ. ಯೋಜನೆ ಆರಂಭವಾದ 25 ವರ್ಷಗಳಲ್ಲಿ ನಮಗಾದಿರುವ ಅನುಭವ ಇಂಥದೇ. ನಮ್ಮ ಯೋಜನೆಯ ಪ್ರಕ್ರಿಯೆಯಲ್ಲೇ ಮೂಲಭೂತವಾದ ಏನೋ ತಪ್ಪಿದೆ ಎಂದು ನಾನು ಹೇಳಬಯಸುತ್ತೇನೆ. ಕಡಿಮೆ ಜನರ ಕೈಯಲ್ಲಿ ಸಂಪತ್ತು ಕೇಂದ್ರೀಕರಣವಾಗುತ್ತಿದೆ. ಸಾಮಾನ್ಯ ಜನರ ಏಳಿಗೆ ಆಗುತ್ತಿಲ್ಲ. ಬೆಲೆ ಏರುತ್ತಿದೆ. ಕಾಳಸಂತೆ ಹೆಚ್ಚುತ್ತಿದೆ. ಕಪ್ಪು ಹಣ ಹೆಚ್ಚಿ, ಪರ್ಯಾಯ ಮಾರುಕಟ್ಟೆ ಬೆಳೆಯುತ್ತಿದೆ. ಇಡೀ ಯೋಜನಾ ಪ್ರಕ್ರಿಯೆಯನ್ನು ನೀವು ಬದಲಾಯಿಸದ ಹೊರತು ಇವನ್ನು ನಾಶಮಾಡಲು ಸಾಧ್ಯವಿಲ್ಲ. ಯೋಜನೆಗೆ, ಈ ವರ್ಷದ ಯೋಜನೆಗೆ ಹೆಚ್ಚು ಹಣ ನೀಡಿದ್ದೇವೆಂದು ನೀವು ಹೇಳುತ್ತೀರಿ. ಅದರಿಂದ ಏನು ಪ್ರಯೋಜನ? ಹೋದವರ್ಷ ಹಣದುಬ್ಬರ ಶೇಕಡಾ 20 ಇತ್ತು, ಈ ವರ್ಷ ಶೇಕಡಾ 25 ಆಗುತ್ತದೆ. ಇನ್ನೈದು ವರ್ಷಗಳಲ್ಲಿ ಶೇಕಡಾ 100 ಆಗುತ್ತದೆ. ಯೋಜನೆಯ ಗುರಿಗಳು ಈಡೇರುವುದಿಲ್ಲ. ನೀವು ಈ ಬಗ್ಗೆ ಆಲೋಚಿಸಿದ್ದೀರಾ? ಈ ಬಗ್ಗೆ ವಿಜ್ಞಾನಿಗಳ ಜೊತೆ, ಕಾರ್ಮಿಕವರ್ಗದ ಜೊತೆ ಚರ್ಚಿಸಲು ಸಿದ್ಧರಿದ್ದೀರಾ? ಇಲ್ಲ. ಕಾರ್ಮಿಕರ ಜೊತೆ ಬೋನಸ್ ಬಗ್ಗೆ ಚರ್ಚಿಸುತ್ತೀರಿ. ಅವರು ಭ್ರಷ್ಟಾಚಾರವನ್ನು ಎತ್ತಿತೋರಿಸಿದಾಗ ಕೂಗಾಡುತ್ತೀರಿ. ಕಾರ್ಮಿಕರನ್ನು ಟ್ರೇಡ್ ಯೂನಿಯನ್ ನಾಯಕರನ್ನು ಶಿಕ್ಷೆಗೊಳಪಡಿಸುತ್ತೀರಿ. ಭ್ರಷ್ಟಾಚಾರ ತೋರಿಸಿದ್ದಕ್ಕೆ ವಜಾ ಮಾಡುತ್ತೀರಿ. ನಮ್ಮ ಸೂಚನೆಗಳ ಮೇರೆಗೆ ಹಿಂದೂಸ್ತಾನ್ ಫೋಟೋ ಫಿಲಂಸ್ ಮೇಲೆ ಸಿ ಬಿ ಐ. ದಾಳಿ ಮಾಡಿದ್ದಕ್ಕಾಗಿ ಟ್ರೇಡ್‌ಯೂನಿಯನ್ ನಾಯಕರನ್ನು ವಜಾಮಾಡಲಾಗಿದೆ. ನೀವು ಕೆಲಸ ನಿರ್ವಹಿಸುವ ಅದ್ಭುತ ರೀತಿ ಇಂಥದು.

ಕೊನೆಗೆ ಇಲ್ಲಿ ಅಗತ್ಯವಾಗಿರುವುದು ಇಡೀ ಯೋಜನಾ ಪ್ರಕ್ರಿಯೆಯ ಬಗ್ಗೆ ಮರು ಆಲೋಚನೆ. ನಮ್ಮ ಸಂಪನ್ಮೂಲಗಳನ್ನು ಒಗ್ಗೂಡಿಸುವುದು ಹೇಗೆ, ನಮ್ಮ ದೇಶದ ಮೇಲೆಯೇ ಅವಲಂಬಿತವಾಗುವುದು ಹೇಗೆ, ವಿದೇಶಿ ತಾಂತ್ರಿಕತೆಯ ಮೇಲೆ ಅವಲಂಬನವನ್ನು ಬಿಡುವುದು ಹೇಗೆ ಎಂಬುದರ ಬಗ್ಗೆ ಆಲೋಚಿಸಬೇಕಾಗಿದೆ. ಇದು ಆಗದವರೆಗೆ, ಯೋಜನೆಯ ಬಗೆಗಿನ ಮಾತುಕತೆಗಳು ಜನರನ್ನು ವಂಚಿಸುವ ಸಾಧನಗಳಾಗುತ್ತವೆ. ಈ ದೇಶದ ಜನ ಒಂದು ದಿನ ದಂಗೆಯೇಳುತ್ತಾರೆ. ಅವರು ಸುಮ್ಮನಿರುವುದಿಲ್ಲ.

●

ಎಸ್.ಎಫ್.ಐ. ಮುಖಂಡರ ಮೇಲೆ ಹಲ್ಲೆ

ಕೋಲಾರ ಶಾಖೆಯ ಸಹ ಕಾರ್ಯದರ್ಶಿ ಕಾಂ. ಮುನಿವೆಂಕಟಸ್ವಾಮಿ ಮತ್ತು ಇತರೆ ಆರು ಮಂದಿಯ ಮೇಲೆ ಆಗಸ್ಟ್ 28 ರಂದು ಸರಕಾರಿ ಕಾಲೇಜಿನ ಆವರಣದಲ್ಲಿ ಕೆಲವು ದುಷ್ಕರ್ಮಿಗಳು ಹಲ್ಲೆ ನಡೆಸಿದರು. ಕಾಂ. ಮುನಿವೆಂಕಟಸ್ವಾಮಿಯವರಿಗೆ ತೀವ್ರತರದ ಗಾಯವಾಗಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರ ಮೇಲೆ ಹಲ್ಲೆ ನಡೆಸಿದ ನಂತರ ಒಕ್ಕಲಿಗರ ಸಂಘದ ಹಾಸ್ಟೆಲಿಗೆ ನುಗ್ಗಿ ಬಟ್ಟೆ, ಪಾತ್ರೆ, ಹಣ, ಆರು ಗಡಿಯಾರಗಳನ್ನು ಲೂಟಿ ಹೊಡೆದು ಪುಸ್ತಕಗಳನ್ನು ಬಾವಿಗೆ ಹಾಕಲಾಯಿತು.

ಇತ್ತೀಚೆಗೆ ಕೋಲಾರದಲ್ಲಿ ಎಸ್. ಎಫ್. ಐ. ಪ್ರಭಾವ ಹೆಚ್ಚುತ್ತಿರುವುದರಿಂದ ಕೆಲವು ದುಷ್ಟಶಕ್ತಿಗಳು ವಿದ್ಯಾರ್ಥಿಗಳ ನಡುವೆ ಹಳ್ಳಿ—ಪಟ್ಟಣ ಎಂಬ ಸಂಕುಚಿತಭಾವನೆಯನ್ನು ಪ್ರಚೋದಿಸುತ್ತಿದ್ದಾರೆ, ಹಲ್ಲೆ ನಡೆಸಿದ ದುಷ್ಕರ್ಮಿಗಳ ಪೈಕಿ ವಿದ್ಯಾರ್ಥಿಕ್ರಿಯಾಸಮಿತಿಯ ಕೆಲವರೂ ಸೇರಿದ್ದಾರೆ,

ಎಸ್. ಎಫ್. ಐ. ಕಾರ್ಯಕರ್ತರ ಮೇಲೆ ನಡೆಸಲಾದ ಈ ಅಮಾನುಷ ಹಲ್ಲೆಯನ್ನು ಎಸ್. ಎಫ್. ಐ. ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ, ಗೂಂಡಾಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲು ಕೋಲಾರ ಜಿಲ್ಲಾ ಪೋಲೀಸ್ ಅಧಿಕಾರಿಗಳನ್ನು ಒತ್ತಾಯಿಸಲಾಗಿದೆ. ವಿದ್ಯಾರ್ಥಿಗಳು ಹಳ್ಳಿ ಪಟ್ಟಣ ಎಂಬ ಪ್ರಚೋದನೆಗೆ ಒಳಗಾಗದೆ ಐಕ್ಯತೆಯಿಂದ ಇರಬೇಕಾಗಿ ಸಹ ರಾಜ್ಯ ಸಮಿತಿಯು ಕರೆ ನೀಡಿದೆ.

○

೬ ದಿನ ಕೆಲಸ ಕೊಡಲು ಒತ್ತಾಯ

ಕಳೆದ ಒಂದು ತಿಂಗಳಿಂದ ಸೌತ್ ಕೆನರಾ ಹೋಮ್ ಇಂಡಸ್ಟ್ರೀಸ್‌ರವರು ತಮ್ಮ ಬೀಡಿ ಕಟ್ಟುವ ಮಜೂರರಿಗೆ ವಾರಕ್ಕೆ ಮೂರು ದಿವಸ ಮಾತ್ರ ಕೆಲಸ ಕೊಟ್ಟು ಉಳಿದ ಮೂರು ದಿವಸ ಉಪವಾಸಕ್ಕೆ ದೂಡಿದ್ದಾರೆ.

ಬೆಲೆ ಏರಿಕೆಯಿಂದ ತೀರಾ ಸಂಕಷ್ಟಕ್ಕೊಳಗಾಗಿರುವ ಕಾರ್ಮಿಕರಿಗೆ ಇದರಿಂದಾಗಿ ಜೀವನ ನಡೆಸುವುದು ಕಷ್ಟವಾಗಿದೆ,

ಆದುದರಿಂದ ಕೂಡಲೇ ಆರು ದಿವಸ ಕೆಲಸ ಕೊಡಬೇಕೆಂದೂ ಇಲ್ಲದಿದ್ದರೆ ಕೆಲಸವಿಲ್ಲದ ದಿನಗಳಿಗೆ ಪರಿಹಾರ ನೀಡಬೇಕೆಂದೂ, ಅಷ್ಟಮಿಯೊಳಗೆ ರಜಾ ಸಂಬಳ ಕೊಡಬೇಕೆಂದೂ ಒತ್ತಾಯಿಸಿ ಮಂಗಳೂರು ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಜೆ. ವೀರಪ್ಪನವರ ನೇತೃತ್ವದಲ್ಲಿ ಕಾರ್ಮಿಕರ ಶಿಷ್ಟಮಂಡಳಿ ಸದ್ರಿ ಮೇನೇಜ್‌ಮೆಂಟನ್ನು ತಾ. 28-8-1980 ರಂದು ಒತ್ತಾಯಿಸಿದೆ,

●

“ಬಂಡಾಯದ ಕಿಡಿ ಮುಂದುವರಿಯಲಿ”

ಸಾಹಿತ್ಯ ಮತ್ತು ರಾಜಕೀಯ ನಿಷ್ಠೆ

(ಬಿಜಾಪುರದಲ್ಲಿ ನಡೆದ ಬಂಡಾಯ ಸಾಹಿತ್ಯ ಸಮ್ಮೇಳನದ ವಿವಿಧ ಗೋಷ್ಠಿಗಳಲ್ಲಿ ನಡೆದ ಚರ್ಚೆ ಮಂಡಿಸಿದ ಅಭಿಪ್ರಾಯಗಳ ವರದಿ)

“ವ್ಯಕ್ತಿವಾದಿ ಎಂದರೆ ವಾಸ್ತವದಿಂದ ಪಲಾಯನ. ನಶಿಸುತ್ತಿರುವುದರಿಂದ ಹೊಸ ಸಂವೇದನೆ ಸಾಧ್ಯ. ಜನಪರ ಸಾಹಿತಿ ಜನಗಳ ಸಾಕ್ಷೀ ಪ್ರಜ್ಞೆಯಿಂದ ಸ್ಪಷ್ಟಪಡಿಸಿಕೊಳ್ಳುತ್ತಾನೆ. ಟಾಲ್‌ಸ್ಟಾಯ್‌ಗಿದ್ದ ಬದುಕಿನ ನಿಷ್ಠೆ ಮನುಷ್ಯನನ್ನು ಬದುಕಿಸಬಲ್ಲಂತ ರಾಜಕೀಯ ನಿಷ್ಠೆಯಾಗಿತ್ತು. ಕ್ರಾಂತಿಕಾರ ಸಾಹಿತಿ ಮೂರು ವಿಶಿಷ್ಟ ಸಂದರ್ಭಗಳನ್ನು ಎದುರಿಸಬೇಕಾಗುತ್ತದೆ. ಮೊದಲನೆಯದಾಗಿ ಕ್ರಾಂತಿಪೂರ್ವ ಜನರನ್ನು ತಯಾರು ಮಾಡುವುದು, ಎರಡನೆಯದಾಗಿ ಕ್ರಾಂತಿಯ ಸಂದರ್ಭದಲ್ಲಿ ಕವಿ ಕಲಿಯಾಗಬಹುದು. ಇಲ್ಲಿ ಕ್ರಾಂತಿಕಾರ ಮುಂದೆ ಬರುತ್ತಾನೆ. ಸಾಹಿತಿ ಹಿಂದೆ ಸರಿಯುತ್ತಾನೆ. ಮೂರನೆಯದಾದಿ ಕ್ರಾಂತಿಯ ನಂತರದ ಯಥಾವತ್ತಣ ಚಿತ್ರಣ ಸಾಹಿತಿ ಕೊಡಬೇಕಾಗುತ್ತದೆ. ಆದರೆ ಎರಡನೆ ಹಂತದಲ್ಲಿ ಎಷ್ಟುಮಂದಿ ಸಾಹಿತಿಗಳು ಬೀದಿಗಿಳಿಯಬಲ್ಲರು” ಎಂದು ಪ್ರಶ್ನಿಸುತ್ತಾರೆ ಲಿಂಗದೇವರು ಹಳೇಮನಿ. ಮನುಷ್ಯ ಮನುಷ್ಯರ ನಡುವೆ ಜೇನಿಗೋಡೆ ನಿರ್ಮಿಸಿರುವ ಕೃತಕತೆಯಲ್ಲಿ ಮಾನವೀಯತೆ ಬರಲು ಹೇಗೆ ಸಾಧ್ಯ ಎನ್ನುತ್ತಾರೆ ಕುಂ. ವೀರಭದ್ರಪ್ಪ. ದಿಗಂಬರ ಕಾವ್ಯದ ಕುರಿತು ಮಾತನಾಡುತ್ತ. ಸಾಹಿತ್ಯ ಮತ್ತು ರಾಜಕೀಯ ನಿಷ್ಠೆ ಎನ್ನುವ ವಿಚಾರ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಡಾ. ಜಿ. ರಾಮಕೃಷ್ಣ ಮಾತನಾಡುತ್ತ “ಅರಾಜಕೀಯದಲ್ಲೂ ರಾಜಕೀಯ ಪ್ರಜ್ಞೆ ಇದೆ. ಭಾವುಕತೆಯುಳ್ಳದ್ದು ಪರಂಪರಾಗತ ವಾದಕ್ಕೆ ಅಂಟಿಕುಳಿತವರು ವಿಶ್ಲೇಷಣೆ ಮಾಡುವ ಅಗತ್ಯವಿಲ್ಲ. ಸಾಹಿತ್ಯದಲ್ಲಿ ರಾಜಕೀಯ ಪ್ರಜ್ಞೆ ಬೇಕೆ ಬೇಡವೇ ಎನ್ನುವ ಚರ್ಚೆಯೇ ಅನವಶ್ಯಕ. ಆದರೆ ಎಂತಹ ರಾಜಕೀಯ ಪ್ರಜ್ಞೆ ಎನ್ನುವುದು ಮುಖ್ಯ” ಎನ್ನುತ್ತಾರೆ.

ಸಾಹಿತ್ಯ ಮತ್ತು ಸಮಕಾಲೀನತೆ :

“ಜನರಿಗೆ ಅಭಿವ್ಯಕ್ತಿಕೊಟ್ಟ ಸಾಹಿತಿ ಹೊಸ ವ್ಯವಸ್ಥೆಗೆ ಅಣಿಯಾಗಿ ನಿಲ್ಲುತ್ತಾನೆ. ಟಾಲ್‌ಸ್ಟಾಯ್, ಪ್ರೇಮ್‌ಚಂದ್, ನೆರೂಡ ಇತರರಿಗಿಂತ ಭಿನ್ನವಾಗುವುದು ಹೆಚ್ಚು ಸಾಮಾಜಿಕವಾಗುವುದರಿಂದ ಹೆಚ್ಚು ಬದುಕಿಗೆ ನಿಷ್ಠರಾಗುವುದರಿಂದ. ಸಿದ್ಧಲಿಂಗಯ್ಯನವರ ಸಾವಿರಾರು ನದಿಗಳು ವಿವಿಧ ಪ್ರಗತಿಪರ ಶಕ್ತಿಗಳು ಒಂದುಗೂಡುವುದರ ಸೂಚನೆ. ವರ್ಣಶಕ್ತಿ ಸೃಷ್ಟಿ ಮಾಡಿರುವ ಕ್ರೂರ ಹಿಂಸೆಯ ಹಿಂದೆ ಇರುವ ವರ್ಗಹೋರಾಟದ ಅಗತ್ಯ ಕಂಡುಕೊಂಡು ಹೊಸ ಕಾವ್ಯದ ರೂಪುಗೊಳ್ಳುತ್ತಿದೆ” ಎಂದರು ರಮಜಾನ ದರ್ಗಾ.

ಕನ್ನಡ ಕಥಾ ಸಾಹಿತ್ಯದಲ್ಲಿ ಪ್ರತಿಭಟನೆಯ ಸ್ವರೂಪದ ಬಗ್ಗೆ ಬಿ. ಗಂಗಾಧರಮೂರ್ತಿ ಮಾತನಾಡುತ್ತ “ಇಲ್ಲಿ ಅನ್ನ ಇರುವವನಿಗೆ ಇರುವ ಸತ್ಯ ಬೇರೆ ಅನ್ನ ಇಲ್ಲದವನಿಗೆ ಇರುವ ಸತ್ಯಬೇರೆ. ಶೋಷಣೆ ವರ್ಗಸಮಾಜದಲ್ಲಿ ಅನಿವಾರ್ಯ. ಒಬ್ಬನ ಸಾವಿಗೆ ನಾನಾ ಕಾರಣ ಎನ್ನುವ ಪ್ರಜ್ಞೆಬೇಕು. ಬರಹಗಾರನಾಗಿ ಸಾಹಿತ್ಯದಲ್ಲಿ ಬರುವ ವೈರುಧ್ಯಗಳನ್ನು ಗುರುತಿಸಬೇಕು” ಎಂದರು. ಜನಪ್ರಿಯ ಸಾಮಾಜಿಕ ಕಾದಂಬರಿಯಲ್ಲಿ ಹೆಣ್ಣು ಎನ್ನುವ ವಿಷಯ ಮಾತನಾಡುತ್ತ ಎನ್. ಗಾಯತ್ರಿಯವರು ಜನಪ್ರಿಯ ಕಾದಂಬರಿಗಳನ್ನು ಮೂರು ವಿಭಾಗಮಾಡಿ 1) ವೈಭವೀಕರಿಸುವ 2) ಸಿನಿಮೀಯ 3) ನಿರ್ದಿಷ್ಟ ಸಿದ್ಧಾಂತದ ಮಿತಿಇಲ್ಲದೇ ಕೊರಗುವ ಕಾದಂಬರಿಗಳು ಎಂದರಲ್ಲದೆ ಮಹಿಳೆಯರು ಚಟವಾದಿ ಕತೆ ಬರೆಯುವುದೂ ಸಲೀಸಾಗಿ ರೋಚಕ ಕತೆ ಬರೆಯುವುದು ಹೆಚ್ಚು. ಇವು ಕೀಳು ಅಭಿರುಚಿಗೆ ಕಾರಣವಾಗಿವೆ. ಸಾಂಸ್ಕೃತಿಕ ಕಾಳಜಿಯುಳ್ಳ ಗಂಭೀರ ಕೃತಿಗಳು ಬರಬೇಕಾಗಿದೆಯೆಂದರು” ಸಮಾಜವಾದಿ ವಾಸ್ತವತೆ ಬಗ್ಗೆ ಡಾ. ಬಿ ಕೃಷ್ಣಮೂರ್ತಿ ಮಾತನಾಡುತ್ತ “ವಾಸ್ತವತೆಯನ್ನು ಚಿತ್ರಿಸುವಾಗ ಅದರ ಹಿನ್ನಲೆ ಹಾಗೂ ಮುನ್ನಡೆಯ ಕಡೆ ಸ್ಪಷ್ಟವಾದ ಪ್ರಜ್ಞಾಪೂರ್ವಕವಾದ ಗಮನ ಅಗತ್ಯ. ಇಂತಹ ವಾಸ್ತವತೆಯ ಚಿತ್ರಣವನ್ನು ಕೊಡಬೇಕಾದರೆ ಚಿತ್ರಿಸುವಾಗ, ಕಲಾಕಾರ ವಾಸ್ತವತೆಯ ರೂಪಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಪ್ರಜ್ಞಾಪೂರ್ವಕವಾಗಿ ಸ್ಪಂದಿಸುತ್ತಿದ್ದರೆ ಮಾತ್ರ ಸಾಧ್ಯ” ಎಂದರು ಅಧ್ಯಕ್ಷತೆ ವಹಿಸಿದ್ದ ದ್ಯಾವನೂರ ಮಹಾದೇವ. “ಸಾಹಿತ್ಯ ಸಮಕಾಲೀನ ಜೀವನಕ್ಕೆ ಸ್ಪಂದಿಸುತ್ತಿದ್ದರೆ ಮಾತ್ರ ಜೀವಂತ ಸಾಹಿತ್ಯವಾಗಬಲ್ಲದು” ಎಂದರು.

ಸಮೂಹ ಮಾಧ್ಯಮಗಳು ಮತ್ತು ಸಮಾಜ ಬದಲಾವಣೆ :

“ಸಾಂಸ್ಕೃತಿಕ ರಂಗದಲ್ಲಿರುವ ವೈರಿಗಳನ್ನು ಗುರುತಿಸಿಕೊಂಡು ಅವರ ವಿರುದ್ಧ ಯಾರು ಹೋರಾಡುತ್ತಾರೋ ಅವರೆಲ್ಲರನ್ನು ಒಂದುಗೂಡಿಸಿ ಪ್ರಬಲವಾದ ಚಳುವಳಿಯೊಂದನ್ನು ರೂಪಿಸಬೇಕು.” ಎಂದರು ಪ್ರಸನ್ನ. ಸಿನಿಮಾ, ಪ್ರತಿಷ್ಠಿತ ಶಕ್ತಿಗಳು ಎನ್ನುವ ವಿಷಯದ ಬಗ್ಗೆ ಸಂಪಿಗೆ ತೋಂಟದಾರ್ಯ ಮಾತನಾಡುತ್ತ “ಖಾಸಗಿ ಬಂಡವಾಳಶಾಹಿ ಸಿನಿಮಾ ವ್ಯವಸ್ಥೆ ನಮ್ಮ ಸಮಾಜಕ್ಕಿಂತ ಭಿನ್ನವೇನೂ ಅಲ್ಲ” ಎಂದರು. ಬೀದಿ ನಾಟಕಗಳ ಬಗ್ಗೆ ಎ ಎಸ್. ಮೂರ್ತಿ ಮಾತನಾಡುತ್ತ ಬದಲಾವಣೆ ತನ್ನಷ್ಟಕ್ಕೆ ತಾನೇ ಆಗುವುದಿಲ್ಲ. ಬೀದಿನಾಟಕಗಳ ವಿಕೇಂದ್ರೀಕರಣ ಆಗಬೇಕೆಂದರು. ಅಧ್ಯಕ್ಷತೆ ವಹಿಸಿದ ಬಿ. ವಿ. ವೈಕುಂಟರಾಜು ಮಾತನಾಡುತ್ತ “ಮೇಲಿನ ವರ್ಗಕ್ಕೆ ಯಥಾಸ್ಥಿತಿವಾದಬೇಕು. ಕೆಳಗಿನ ವರ್ಗಕ್ಕೆ ಸಮಾಜ ಬದಲಾವಣೆಬೇಕು. ಈ ದುಡಿಯುವ ಜನರ ಆಶಯಗಳಿಗೆ ಸಮೂಹ ಮಾಧ್ಯಮಗಳನ್ನು ಉಪಯೋಗಿಸಿಕೊಳ್ಳಬೇಕೆಂದರೆ ರೇಡಿಯೋ ಸರಕಾರದ ಕೈಯಲ್ಲಿದೆ. ಪತ್ರಿಕೆಗಳು ಬಂಡವಾಳಶಾಹಿಗಳ ಕೈಯಲ್ಲಿವೆ ಸಿನಿಮಾ ಸಾಮಾನ್ಯರಿಗೆ ಎಟುಕಲಾರದಷ್ಟು ಮೇಲೇರುತ್ತಿದೆ ಉಳಿದಿರುವ ಮಾರ್ಗ ನಾಟಕ ಎಲ್ಲರಿಗೂ ತಲುಪುವಂತಹದು ಇದನ್ನು ಜನಪರ ಮಾಡಿಕೊಂಡು ಪ್ರಬಲವಾದ ಚಳುವಳಿ ರೂಪಿಸಬೇಕೆಂದರು.

ಜನಪದ :

“ಜಾನಪದ ಕತೆಗಳಲ್ಲಿ ಕಷ್ಟ ಪರಿಹಾರ ಎಂದು ಬರುವುದರಲ್ಲಿ ಹೊಸ ಸಮಾಜದ ಆಶಯ ಕಾಣುತ್ತದೆ. ಅತೃಪ್ತಿ, ಬೈಗಳ ರೂಪದಲ್ಲಿ ಪ್ರತಿಭಟನೆ ಹೊರಹೊಮ್ಮಿದೆ.” ಈ ಬಂಡಾಯದ ಧೋರಣೆ ಜನಪದದಲ್ಲಿ ಗಮನಿಸಿದವರು ರಂಗಾರೆಡ್ಡಿ ಕೋಡಿರಾಂಪುರ. “ಜನವಾಣಿಗೆ ಮೂಲಬೆವರು ಸುರಿಸಿದ್ದು ದಲಿತ ಜನ. ಅಂತಹವರನ್ನೇ ಶೋಷಣೆಗೀಡುಮಾಡಿದ್ದು ಇತಿಹಾಸದ ದುರಂತ. ದೇವರು ಧರ್ಮ ಒಪ್ಪಿಕೊಂಡ ಜನ ಕ್ರಾಂತಿಗೆ ಅಡ್ಡಿಯಾಗುತ್ತಾರೆ” ಎನ್ನುತ್ತಾರೆ ಚೆನ್ನಣ್ಣ ವಾಲೀಕರ. ಯಕ್ಷಗಾನ ಮತ್ತು ಬಯಲಾಟದ ಬಗ್ಗೆ ಬಿ ರಾಮಕೃಷ್ಣ ಮಾತನಾಡುತ್ತ “ಪುರೋಹಿತರು ಯಕ್ಷಗಾನವನ್ನು ಜನಪದವಾಗಿಸಲು ವಿರೋಧಿಸುತ್ತಾರೆ. ಕಾರ್ಮಿಕ ವಿರೋಧಿ ನೀತಿಗೆ ಧರ್ಮಸ್ಥಳದ ಅಧಿಕಾರಿಗಳು ಯಕ್ಷಗಾನ ಬಳಸಿಕೊಂಡಿದ್ದಾರೆ” ಎಂದರು.

“ಆಳುವವನ ಸಂಸ್ಕೃತಿಯೇ ಶಿಷ್ಟ ಸಂಸ್ಕೃತಿ ಆಳಿಸಿಕೊಳ್ಳುವವನ ಸಂಸ್ಕೃತಿಯೇ ಜನಪದ ಸಂಸ್ಕೃತಿ ಜನಪದ ಕಾವ್ಯಗಳಲ್ಲಿ ಬರುವ ದೇವರನ್ನು ಒಪ್ಪಿಕೊಳ್ಳುವುದಕ್ಕಿಂತ ಜಮೀನ್ದಾರರ ವಿರುದ್ಧ ಸಿಟ್ಟು ಮುಖ್ಯ. ಇಂತಹ ಎಚ್ಚರವನ್ನು ಉಪಯೋಗಿಸಿಕೊಂಡು ರಾಜಕೀಯ ಸ್ವರೂಪ ಕೊಡಬೇಕು. ಸಂಘಟನೆಗೆ ತೊಡಗಿಸಬೇಕು ಒದೆಯುವವನ ವಿರುದ್ಧ ಕುದಿತಕ್ಕೆ ಅಭಿವ್ಯಕ್ತಿಕೊಡಬೇಕು. ಜನತೆಗೆ ಸೂಕ್ತ ರಾಜಕೀಯ ಕೊಡುವುದರ ಸಂಘಟಿಸುವುದರ ಮೂಲಕ ಹೋರಾಟಕ್ಕಿಳಿಯಬಹುದು.” ಎಂದರು ದಲಿತ ಕವಿ ಸಿದ್ಧಲಿಂಗಯ್ಯನವರು. ಅಧ್ಯಕ್ಷತೆ ವಹಿಸಿದ್ದ ಕಾಳೇಗೌಡ ನಾಗವಾರ ಮಾತನಾಡುತ್ತ ಬಂಡಾಯದ ಆಶಯಗಳನ್ನು ಅಭಿವ್ಯಕ್ತಿಸಲು ಜನಪದ ಪ್ರಬಲವಾದ ಮಾಧ್ಯಮ” ಎಂದರು.

ವಚನ ಚಳವಳಿ :

“ಬಸವಣ್ಣನವರ ಕಾಲದಲ್ಲೂ ಜನ ತೆರಿಗೆ ಭಾರದಿಂದ ಸತ್ತಿದ್ದಾರೆ. ವರ್ತಕರು ಮೂರಕ್ಕೆ ತೆಗೆದುಕೊಂಡು ಆರಕ್ಕೆ ಮಾರುತ್ತಿದ್ದರು. ಅವರೇ ಧರ್ಮಶಾಲಿಗಳು ಯಾವುದೇ ಚಳುವಳಿ ಬರೀ ಧಾರ್ಮಿಕ ಕಾರಣಗಳಿಗಾಗಿ ಹುಟ್ಟಿಕೊಂಡುದುದಲ್ಲ. ಒಂದು ಚಳುವಳಿಗೆ ಸೈದ್ಧಾಂತಿಕ ನೆಲೆಯ ಜತೆಗೆ ಒಳ್ಳೆಯ ನಾಯಕತ್ವ ಇಲ್ಲದಿದ್ದರೆ ಹೇಗೆ ದಾರಿ ತಪ್ಪುತ್ತದೆ ಎನ್ನುವುದಕ್ಕೆ ಬಸವ ಚಳುವಳಿ ಉದಾಹರಣೆ” ಎನ್ನುತ್ತಾರೆ ಸಿ ವೀರಣ್ಣ. “ವಚನ ಸಾಹಿತ್ಯದ ಸಂಗ್ರಹಣೆಗೆ ವಚನಕಾರರ ಒಳ್ಳೆಯ ಗುಣಗಳೂ ಕಾರಣ” ಎನ್ನುತ್ತಾರೆ ದೇವಯ್ಯ ಹರವೆ “ಪತಿಭಕ್ತಿ ಎನ್ನುವ ಸಮಾಜದಲ್ಲಿ ಸತಿಭಕ್ತಿ ಎನ್ನುವ ಮೌಲ್ಯ ಯಾಕೆ ಇಲ್ಲ” ಎಂದು ಪ್ರಶ್ನಿಸುತ್ತಾರೆ ಕೆ. ಶರೀಫಾ. ಪ್ರೊ. ಹಿಪ್ಪರಗಿಯವರೂ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಎಚ್ ಎಲ್. ಚನ್ನಯ್ಯ ಮಾತನಾಡುತ್ತ “ಕಾಲಕಾಲಕ್ಕೂ ಪ್ರತಿಗಾಮಿ ಶಕ್ತಿಗಳು ತಡೆಯೊಡ್ಡುತ್ತವೆ ಇವನ್ನು ಒಡೆದು ಪ್ರಗತಿಪಥದತ್ತ ಸಾಗಲು ಯಾವಾಗಲೂ ಕ್ರಾಂತಿಕಾರಿ ಶಕ್ತಿಗಳು ಬೇಕು” ಎನ್ನುತ್ತಾರೆ.

ಕವಿಗೋಷ್ಠಿ :

ಅನೇಕ ಜನರು ಕವಿಗಳು ಕವನಗಳನ್ನು ಓದಿದರು. ಅಧ್ಯಕ್ಷತೆ ವಹಿಸಿದ್ದ ಚಂದ್ರಶೇಖರ ಪಾಟೀಲ ಮಾತನಾಡುತ್ತ ಮಾನವೀಯತೆಯ ಚೌಕಟ್ಟಿಗೆ ಯಾವುದೂ ವರ್ಜ್ಯ ಅಲ್ಲ ನಮ್ಮಷ್ಟಿಗೆ ನಾವು ಗೋಡೆಕಟ್ಟಿಕೊಂಡರೆ ಅಷ್ಟರಮಟ್ಟಿಗೆ ನಾವು ಜೀವನದಿಂದ ವಂಚಿತರಾಗುತ್ತೇವೆ ವೈಯಕ್ತಿಕ ಭಿನ್ನಾಭಿಪ್ರಾಯ ಬದಿಗಿಟ್ಟು ಹೋರಾಟಕ್ಕೆ ಅಣಿಯಾಗಬೇಕು ಎನ್ನುವ ಗೋವಿಂದಪಿಳ್ಳೆಯವರ ಮಾತನ್ನು ನೆನಪಿಸಿಕೊಂಡರಲ್ಲದೆ ಹೆಚ್ಚು ಹೆಚ್ಚು ಜನರನ್ನು ತನ್ನಲ್ಲಿ ಒಳಗೊಂಡು ಬಂಡಾಯದ ಕಿಡಿಯನ್ನು ಮುಂದುವರಿಸಿಕೊಂಡುಹೋಗಬೇಕೆಂದರು.

ವರದಿ : ಗುಡಿಹಳ್ಳಿ ನಾಗರಾಜು

ಕುಣಿಗಲ್‌ನಲ್ಲಿ

ಎಸ್.ಎಫ್.ಐ. ಸಭೆ

ತಾ. 28ರಂದು ಸರ್ಕಾರಿ ವಿದ್ಯಾರ್ಥಿ ನಿಲಯದ ಸಭಾಂಗಣದಲ್ಲಿ ನೂರಾರು ವಿದ್ಯಾರ್ಥಿಗಳು ಸಭೆಯಲ್ಲಿ ಭಾಗವಹಿಸಿದ್ದು ಸಭೆಯನ್ನು ಉದ್ದೇಶಿಸಿ ಎಸ್. ಎಫ್. ಐ. ರಾಜ್ಯಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಆರಾಧ್ಯರವರು ಮಾತನಾಡಿ ರಾಜ್ಯಾದ್ಯಂತ ವಿದ್ಯಾರ್ಥಿಗಳು ಒಗ್ಗಟ್ಟಾಗಿ ತಮ್ಮ ಕುಂದು ಕೊರತೆ ಮತ್ತು ಬೇಡಿಕೆ ಈಡೇರಿಕೆಗೋಸ್ಕರ ಎಸ್. ಎಫ್. ಐ ನೇತೃತ್ವದಲ್ಲಿ ಸಂಘಟಿತರಾಗಬೇಕೆಂದು ವಿದ್ಯಾರ್ಥಿಗಳಿಗೆ ಕರೆಕೊಟ್ಟರು. ನಂತರ ಕಾಂ. ಬಿ.ಜಿ. ಗಂಗಾಧರಯ್ಯನವರು ಮಾತನಾಡಿ ಸ್ಥಳೀಯವಾಗಿ ವಿದ್ಯಾರ್ಥಿಗಳಿಗೆ ಆಗುತ್ತಿರುವ ಅನ್ಯಾಯ ಮತ್ತು ಹಾಸ್ಟಲ್‌ಗಳಲ್ಲಿ ಇರುವ ದುರವ್ಯವಸ್ಥೆಗಳನ್ನು ವಿವರಿಸಿ ಈ ಎಲ್ಲಾ ದಿಕ್ಕುಗೆಟ್ಟ ವ್ಯವಸ್ಥೆ ಮತ್ತು ಆಡಳಿತ ವರ್ಗದ ವಿರುದ್ಧ ಉಗ್ರಚಳುವಳಿ ನಡೆಸಿ ವಿದ್ಯಾರ್ಥಿಗಳೆಲ್ಲರೂ ಸಂಕುಚಿತ ಭಾವನೆಯನ್ನು ಬಿಟ್ಟು ಸಂಘಟಿತರಾಗಬೇಕೆಂದು ಕರೆನೀಡಿದರು ದಲಿತ ಸಂಘರ್ಷ ಸಮಿತಿ ಸಂಚಾಲಕರಾದ ಕಾಂ. ಮುದ್ದಹನುಮಯ್ಯನವರು ಭಾಗವಹಿಸಿದ್ದರು

ಬಿಜಾಪುರದಲ್ಲಿ ರೈತರ ಬೇಡಿಕೆ ದಿನಾಚರಣೆ

ರೈತನು ಕೊಳ್ಳುವ ಕಬ್ಬಿಣ, ಬೀಜ, ಕಸಗೊಬ್ಬರ, ಡಿಜಲ್ ಮೊದಲಾದವುಗಳನ್ನು ಅಗ್ಗದರದಿಂದ ರೈತರಿಗೆ ಒದಗಿಸಬೇಕು. ರೈತಬೆಳೆಯುವ ವಸ್ತುಗಳಿಗೆ ಯೋಗ್ಯಬೆಲೆಸಿಗಬೇಕು, ಭೂಮಿಯಿಲ್ಲದವರಿಗೆ ಜಮೀನು ಸಿಗಬೇಕು, ಕಡಿಮೆ ಬಡ್ಡಿಯಲ್ಲಿ ಸಾಲಸಿಗಬೇಕು, ರೈತರ ಮೇಲೆನಡೆಯುತ್ತಿರುವ ದಬ್ಬಾಳಿಕೆ ನಿಲ್ಲಬೇಕೆಂಬ ಬೇಡಿಕೆಗಳನ್ನು ಮುಂದೆಮಾಡಿ ರೈತಸಂಘದ ವತಿಯಿಂದ ಬಿಜಾಪುರ, ಇಂಡಿ, ಸಿಂದಗಿ, ಬಾಗೇವಾಡಿ, ಜಮಖಂಡಿ, ಮುಧೋಳ ತಾಲ್ಲೂಕಗಳಲ್ಲಿ ತಾ. 1-9-80ರಂದು ರೈತರ ಮೆರವಣಿಗೆ ನಡೆದು ಅಧಿಕಾರಿಗಳಿಗೆ ಬೇಡಿಕೆಗಳ ಮನವಿಯನ್ನರ್ಪಿಸಲಾಯಿತು. ಬಿಜಾಪುರದಲ್ಲಿ ರೈತಸಂಘದ ಅಧ್ಯಕ್ಷ ಭೀಮಸಿ ಕಲಾದಗಿ, ಪ್ರಕಾಶ ಹಿಟ್ಟನಳ್ಳಿಯವರು ಬೇಡಿಕೆಗಳ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದರು, ಎನ್. ಕೆ ಉಪಾಧ್ಯಾಯರು ಅಭಾರ ಮಂಡಿಸಿದರು ನೂರಾರುರೈತರು ಕೆಂಬಾವುಟ, ಬೇಡಿಕೆಗಳ ಫಲಕಗಳನ್ನು ಹಿಡಿದುಕೊಂಡು ಘೋಷಣೆ ಮಾಡುತ್ತಾ ಊರಲ್ಲಿ ಮೆರವಣಿಗೆ ತೆಗೆದು ಜಿಲ್ಲಾಧಿಕಾರಿಗಳಿಗೆ ಮನವಿಯನ್ನರ್ಪಿಸಿದರು.

○

ಆರ್ಥಿಕ ತುರ್ತುಪರಿಸ್ಥಿತಿಯ ಕುರಿತು

(3ನೇ ಪುಟದಿಂದ)

1. ಕೊರತೆ ಹಣ ಸೃಷ್ಟಿಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು.

2. ಜೀವನಾವಶ್ಯಕ ವಸ್ತುಗಳ ಮೇಲಿನ ಅಪ್ರತ್ಯಕ್ಷ ತೆರಿಗೆಗಳನ್ನು ಗಣನೀಯವಾಗಿ ಕಡಿಮೆ ಮಾಡಬೇಕು.

3. ಬಂಡವಾಳಶಾಹಿಗಳ, ವ್ಯಾಪಾರಿಗಳ, ಭೂಮಾಲಕರ ಮತ್ತು ಉನ್ನತ ಅಧಿಕಾರಿಗಳ ಆದಾಯದ ಮೇಲೆ ಮಿತಿ ಹೇರಬೇಕು. ಅವರ ಆಸ್ತಿ ಆದಾಯಗಳ ಮೇಲೆ ಹೆಚ್ಚುತ್ತಿರುವ ದರದಲ್ಲಿ ತೆರಿಗೆ ವಿಧಿಸಬೇಕು.

4. ತೆರಿಗೆ ತಪ್ಪಿಸುವವರಿಗೆ, ಅಕ್ರಮ ಸಂಗ್ರಹಗಾರರಿಗೆ, ಕಳ್ಳಸಂತೆ ಕದೀಮರಿಗೆ, ಭ್ರಷ್ಟಾಚಾರಿಗಳಿಗೆ, ಇತರ ಆರ್ಥಿಕ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಅವರ ಹೆಸರುಗಳನ್ನು ಸಮೂಹ ಮಾಧ್ಯಮಗಳಲ್ಲಿ ಬಹಿರಂಗಗೊಳಿಸಿ ಅವರನ್ನು ಸಮಾಜ ಬಾಹಿರರನ್ನಾಗಿ ಮಾಡಬೇಕು.

5. ರಕ್ಷಣೆ, ಪೋಲೀಸು, ಆಡಳಿತ ವೆಚ್ಚಗಳನ್ನು ಗಣನೀಯವಾಗಿ ಕಡಿಮೆಗೊಳಿಸಬೇಕು. ದೊಡ್ಡ ಬಂಡವಾಳಶಾಹಿಗಳ ಮತ್ತು ಭೂಮಾಲಕರ ಕೈಗಾರಿಕೆ ಹಾಗೂ ವ್ಯವಸಾಯೋದ್ಯಮಗಳಿಗೆ ರಫ್ತು ವ್ಯಾಪಾರ ಸಹಾಯಧನ ನೀಡುವುದನ್ನು ನಿಲ್ಲಿಸಬೇಕು. ಆಗ ಉಳಿಯುವ ಸಂಪನ್ಮೂಲಗಳನ್ನು ಉದ್ಯೋಗ, ಉತ್ಪಾದನೆ ಹೆಚ್ಚಿಸುವ ಆರ್ಥಿಕ ಯೋಜನೆಗಳಿಗೆ ವಿನಿಯೋಗಿಸಬೇಕು.

6. ಜೀವನಾವಶ್ಯಕ ವಸ್ತುಗಳ ಉತ್ಪಾದನೆ ಮತ್ತು ಅವುಗಳ ಸಗಟು ವ್ಯಾಪಾರವನ್ನು ಸಾರ್ವಜನಿಕ ಕ್ಷೇತ್ರವೇ ವಹಿಸಿಕೊಳ್ಳಬೇಕು. ಈ ವಸ್ತುಗಳನ್ನು ದೇಶಾದ್ಯಂತ ಸಮಾನ ಹಾಗೂ ಸುಲಭ ಬೆಲೆಗಳಲ್ಲಿ ಗ್ರಾಮೀಣ ಹಾಗೂ ನಗರಗಳ ಎಲ್ಲಾ ಜನರಿಗೂ ಸಿಗುವಂತೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು.

7. ಗುತ್ತೇದಾರಿ ಕೈಗಾರಿಕಾ ಕುಟುಂಬಗಳಿಗೆ ಮತ್ತು ವಿದೇಶಿ ಬಂಡವಾಳಶಾಹಿಗಳಿಗೆ ಸಂಬಂಧಿಸಿದ ಎಲ್ಲಾ ಕೈಗಾರಿಕೆಗಳನ್ನೂ ವ್ಯಾಪಾರ ವಹಿವಾಟುಗಳನ್ನೂ ರಾಷ್ಟ್ರೀಕರಿಸಬೇಕು.

8 ಭೂಮಿತಿ ಕಾಯ್ದೆಯನ್ನು ನಿರ್ದಿಷ್ಟ ಅವಧಿಯೊಳಗೆ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕು. ಹೆಚ್ಚುವರಿ ವ್ಯವಸಾಯ ಭೂಮಿಯನ್ನು ಭೂಹೀನ ಕೃಷಿಕಾರ್ಮಿಕರಿಗೂ, ಬಡ ರೈತರಿಗೂ, ಹರಿಜನ ಗಿರಿಜನರಿಗೂ ಆದ್ಯತೆ ಇತ್ತು ಮರುವಿತರಣೆ ಮಾಡಬೇಕು.

9. ಸಣ್ಣ ಹಿಡುವಳಿದಾರರ ಕೃಷಿ ಕಾರ್ಮಿಕರ ಋಣ ಭಾರವನ್ನೂ, ಕರ ಭಾರವನ್ನೂ ರದ್ದುಗೊಳಿಸಬೇಕು. ಅವರಿಗೆ ಹೊಸ ಸಾಲ ಸೌಲಭ್ಯಗಳನ್ನು ಒದಗಿಸಿಕೊಟ್ಟು ಕೃಷಿ ಉತ್ಪನ್ನ ಹೆಚ್ಚುವಂತೆ ಮಾಡಬೇಕು. ಅವರ ಫಸಲಿಗೆ ಯೋಗ್ಯ ಬೆಲೆ ಬರುವಂತೆ ಮಾಡಬೇಕು. ಅವರ ಅಗತ್ಯಕ್ಕಿಂತ ಹೆಚ್ಚಿನ ಫಸಲನ್ನು ಯೋಗ್ಯ ಬೆಲೆ ತೆತ್ತು ಸರಕಾರಿ ಸಂಸ್ಥೆಗಳೇ ಸಕಾಲದಲ್ಲಿ ಖರೀದಿಸಬೇಕು.

10. ಕೃಷಿಕಾರ್ಮಿಕರಿಗೆ, ಕೈಗಾರಿಕಾ ಕಾರ್ಮಿಕರಿಗೆ ಕನಿಷ್ಟ ವೇತನ ನಿಗದಿ ಮಾಡಬೇಕು. ಕನಿಷ್ಟ ವೇತನ ಹಾಗೂ ಇತರ ಸೌಲಭ್ಯಗಳು, ಉದ್ಯೋಗಾವಕಾಶ ಅವರಿಗೆ ಸಿಗುವಂತೆ ಮಾಡಬೇಕು. ನಿರುದ್ಯೋಗಸ್ಥರಿಗೆ ನಿರುದ್ಯೋಗ ಭತ್ತೆ ನೀಡಬೇಕು. ಅವರ ಸಂಘಟನೆಗಳಿಗೆ ಪ್ರೋತ್ಸಾಹ ನೀಡಬೇಕು. ವೇತನ ಕಡಿತ, ವೇತನ ಸ್ಥಗಿತ, ಕಡ್ಡಾಯ ಠೇವಣಿ ಇತ್ಯಾದಿಗಳನ್ನು ಕಾರ್ಮಿಕರ ಮೇಲೆ, ನೌಕರರ ಮೇಲೆ ಹೇರಬಾರದು. ಎಲ್ಲಾ ಕಾರ್ಮಿಕರಿಗೂ ನೌಕರರಿಗೂ ವಾರ್ಷಿಕ ಕನಿಷ್ಟ ಬೋನಸ್ ಕೊಡಬೇಕು ಮತ್ತು ಜೀವನಾವಶ್ಯಕ ವೆಚ್ಚಕ್ಕನುಗುಣವಾಗಿ ತುಟ್ಟಿಭತ್ತೆ ನೀಡಬೇಕು, ಉತ್ಪಾದಕತೆ ಹೆಚ್ಚಿದಂತೆ ಅವರ ಸಂಬಳ ಸೌಲಭ್ಯಗಳೂ ಹೆಚ್ಚಬೇಕು.

●

ಎಸ್. ಎಫ್. ಐ. ಆಶ್ರಯದಲ್ಲಿ ಶಿಕ್ಷಣ ತರಗತಿ

ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾದ ಮಂಗಳೂರು ತಾಲ್ಲೂಕು ಸಮಿತಿಯ ಆಶ್ರಯದಲ್ಲಿ ಶಿಕ್ಷಣ ತರಗತಿಯೊಂದು ತಾ. 7-9-80ನೇ ಆದಿತ್ಯವಾರ ಅಶೋಕನಗರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜರುಗಿತು. ಈ ಕಾರ್ಯಕ್ರಮದ ಅಧ್ಯಕ್ಷಸ್ಥಾನವನ್ನು ಕಾಂ. ಶ್ರೀನಿವಾಸ ನಾಟೇಕ್ಕರ್ ಅವರು ವಹಿಸಿದ್ದರು. ಪ್ರಾರಂಭದಲ್ಲಿ ತಾಲ್ಲೂಕು ಸಮಿತಿ ಕಾರ್ಯದರ್ಶಿ ಕಾಂ. ಪಿ. ಉಮೇಶ್ ಭಂಡಾರಿ ಅವರು ಸ್ವಾಗತಿಸಿದರು.

ಕಾಂ. ಮಾಧವ ಅವರು 'ಎಸ್. ಎಫ್. ಐ. ಧ್ಯೇಯೋದ್ದೇಶಗಳು' ಎಂಬ ವಿಷಯದಲ್ಲಿ ಉಪನ್ಯಾಸವನ್ನಿತ್ತರು. ಈ ಸಮಾಜದಲ್ಲಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಿವರಿಸಿದ ಅವರು ಸಮಾಜವಾದಿ ರಾಷ್ಟ್ರಗಳಲ್ಲಿ ವಿದ್ಯಾರ್ಥಿಗಳ ಸ್ಥಿತಿಗತಿ ಹೇಗಿವೆ ಮತ್ತು ಭಾರತದಂತಹ ಬಂಡವಾಳಶಾಹೀ ಸಮಾಜದಲ್ಲಿ ವಿದ್ಯಾರ್ಥಿಗಳ ಅವಸ್ಥೆ ಯಾವ ರೀತಿ ಇದೆ ಎಂಬುದನ್ನು ವಿವರಿಸಿದರು. ಎಸ್. ಎಫ್. ಐ.ಯ ಮುಖ್ಯ ಬೇಡಿಕೆಗಳನ್ನು ಮತ್ತು ಘೋಷಣೆಗಳನ್ನು ಕಾಂ. ಮಾಧವ ಅವರು ವಿವರಿಸಿದರು. ಸುಮಾರು 75 ಮಂದಿ ವಿದ್ಯಾರ್ಥಿಗಳು ಇದರಲ್ಲಿ ಪಾಲ್ಗೊಂಡಿದ್ದರು. ಕೊನೆಯಲ್ಲಿ ಕಾಂ. ಉಮೇಶ್ ರಾವ್ ವಂದಿಸಿದರು.

○

'ಮಳೆಯಲ್ಲಿ ತೊಯ್ದುಕೊಂಡೇ'

ರೈತ ಕೃಷಿ ಕೂಲಿಕಾರರಿಂದ ಭಾರಿ ಪ್ರತಿಭಟನೆ

"ಭೂಮಿ ಇಲ್ಲದವರಿಗೆ ಭೂಮಿ ಕೊಡಿ; ಹಲವಾರು ವರ್ಷಗಳಿಂದ ಸರಕಾರಿ ಜಾಗದಲ್ಲಿ ಕೃಷಿಮಾಡಿ ವಾಸಿಸುತ್ತಾ ಬಂದವರಿಗೆ ದರಖಾಸ್ತು ಕೊಡಿ; ಕೃಷಿ ಕೆಲಸಗಾರರಿಗೆ ಹೆಚ್ಚಿಗೆ ವೇತನ ಕೊಡಿ; ರೈತರು ಬೆಳೆದ ಬೆಳೆಗೆ ಯೋಗ್ಯವಾದ ಬೆಲೆ ದೊರೆಯಲಿ; ಭ್ರಷ್ಟಾಚಾರವನ್ನು ನಿರ್ಮೂಲನಗೊಳಿಸಿ......" ಇವೇ ಮೊದಲಾದ ಘೋಷಣೆಗಳನ್ನು ಕೂಗುತ್ತಾ ನೂರಾರು ಮಂದಿ ರೈತ, ಕೃಷಿ ಕೂಲಿಗಾರರಿಂದ ಸೇರಿದ ಮೆರವಣಿಗೆಯು ಜಡಿಗುಟ್ಟುವ ಮಳೆಯಲ್ಲಿ ತೊಯ್ದುಕೊಂಡೇ ಸುಳ್ಯದ ಮುಖ್ಯ ಬೀದಿಗಳಲ್ಲಿ ಸುತ್ತಾಡಿ ತಹಸೀಲ್ದಾರರ ಕಛೇರಿ ಎದುರು ಸತ್ಯಾಗ್ರಹ ನಡೆಸಿತು. ಪ್ರಾಂತ ರೈತಸಂಘದ ಕರೆಯಂತೆ ದ. ಕ. ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲೂ ರೈತ ಮತ್ತು ಕೃಷಿಕೂಲಿಗಾರರ ಹೋರಾಟ ಸಂಘಟಿಸಲು ಜಿಲ್ಲಾ ರೈತಸಂಘ ತೀರ್ಮಾನಿಸಿದ ಪ್ರಕಾರ, ಸುಳ್ಯ ತಾಲ್ಲೂಕು ರೈತಸಂಘವು ಸೆಪ್ಟಂಬರ 6ರಂದು ಹೋರಾಟವನ್ನು ಪ್ರಾರಂಭಿಸಿತ್ತು. ಮರ್ಕಂಜ, ದೇವಚಳ್ಳ, ವಾಲ್ಮೂರು, ಗುತ್ತಿಗಾರು ಗ್ರಾಮಗಳಿಂದ ಒಟ್ಟಾಗಿ ಜನರು ಮಳೆಯಲ್ಲಿ ತೊಯ್ದುಕೊಂಡೇ 20 ಮೈಲಿ ದೂರವನ್ನು ನಡೆದುಕೊಂಡೇ ಬಂದಿದ್ದರು. ತೊಡಿಖಾನ ಕಡೆಯಿಂದಲೂ ಜಾಥಾದಲ್ಲಿ ಬಂದಿದ್ದರು. ಹತ್ತಾರು ಮೈಲಿ ನಡೆದುಕೊಂಡೇ ಬಂದು, ಮಳೆಯಲ್ಲಿ ತೊಯ್ದುಕೊಂಡು ಪ್ರತಿಭಟನೆ ನಡೆಸಿರುವುದು ಸ್ಫೂರ್ತಿದಾಯಕವಾಗಿತ್ತು.

ಬೇಡಿಕೆಗಳ ಪಟ್ಟಿಯುನ್ನೊಳಗೊಂಡ ಮನವಿಯನ್ನು ತಹಸೀಲ್ದಾರರಿಗೆ ಕೊಟ್ಟು ಚರ್ಚಿಸಿದ ಮೇಲೆ ತಹಸೀಲ್ದಾರರೇ ಸ್ವತಹಾ ಹೊರಗೆ ಬಂದು ನೆರೆದ ರೈತ ಕೃಷಿಕೂಲಿಗಾರರನ್ನುದ್ದೇಶಿಸಿ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಿಸುವ ಆಶ್ವಾಸನೆ ನೀಡಿದರು. ಆಮೇಲೆ ನಡೆದ ರೈತ, ಕೃಷಿಕೂಲಿಗಾರರು ಹತ್ತಿರದಲ್ಲೆ ಡಿವಿಜನಲ್ ಫಾರೆಸ್ಟ್ ಆಫೀಸರವರ ಕಛೇರಿ ಎದುರು ಸತ್ಯಾಗ್ರಹ ನಡೆಸುತ್ತಿದ್ದ ರಬ್ಬರ್ ತೋಟಕಾರ್ಮಿಕರಿಗೆ ಬೆಂಬಲವನ್ನು ಸೂಚಿಸಿದರು. ನೆರೆದ ಜನರು ಮೆರವಣಿಗೆಯ ಮೂಲಕ ರೈತಸಂಘ ಕಛೇರಿ ಎದುರು ಬಂದು ಸೇರಿ ಅಲ್ಲಿ ಸಾರ್ವಜನಿಕ ಸಭೆ ನಡೆಸಲಾಯಿತು.

"ಜನತೆಗಿತ್ತ ಆಶ್ವಾಸನೆಗಳನ್ನು ಈಡೇರಿಸುವುದರಲ್ಲಿ ವಿಫಲವಾದಿರುವ ಕಾಂಗ್ರೆಸ್ (ಐ) ಆಡಳಿತೆಯಲ್ಲಿ ಕಾನೂನು ವ್ಯವಸ್ಥೆ ಕುಸಿದು ಬಿದ್ದಿದೆ; ಅನ್ನ ಕೇಳಿದ ಜನಕ್ಕೆ ಲಾಠಿಗುಂಡು ದೊರೆಯುತ್ತಿದೆ. ರಾಜ್ಯದಲ್ಲಂತೂ ಪೋಲೀಸ್ ದೌರ್ಜನ್ಯ ಮಿತಿಮೀರಿದೆ. ಕೇರಳ, ಬಂಗಾಳ, ತ್ರಿಪುರಾಗಳಂತೆ ರಾಜ್ಯದಲ್ಲೂ ಎಡ ಪ್ರಜಾಪ್ರಭುತ್ವ ಬದಲಿ ಬೆಳೆಸಿ, ಜನತೆಯ ಸಮಸ್ಯೆ ಬಗ್ಗೆ ಸಂಘಟಿತ ಹೋರಾಟ ನಡೆಸುವುದರಿಂದಲೇ ಸಮಸ್ಯೆಗಳ ಪರಿಹಾರ ಸಾಧ್ಯ; ಈಗಾಗಲೇ ರಾಷ್ಟ್ರಮಟ್ಟದಲ್ಲಿ ಸಿ ಪಿ ಐ. (ಎಂ), ಸಿ ಪಿ ಐ. ಮತ್ತು ಇತರ ನಾಲ್ಕು ಪಕ್ಷಗಳು ಸೇರಿ ಜನತೆಯ ಸಮಸ್ಯೆಗಳ ಬಗ್ಗೆ ಹೋರಾಡಲು ಮುಂದಾಗಿರುವುದು ಸ್ವಾಗತಾರ್ಹ. ರಾಜ್ಯದಲ್ಲೂ ಎಡ ಪಕ್ಷಗಳು ಒಂದಾಗಿ ಇತರೆ ಪ್ರಜಾಪ್ರಭುತ್ವ ಶಕ್ತಿಗಳನ್ನು ಸೇರಿಸಿ ಹೋರಾಡುವಂತಾಗಲು ನಾವು ಶ್ರಮಿಸುತ್ತಲಿದ್ದೇವೆ" ಎಂದು ಕಾಂ ಮೆಕ್ಕಡ್ಕ ರಾಮಯ್ಯಗೌಡರ ಅಧ್ಯಕ್ಷತೆಯಲ್ಲಿ ಸೇರಿದ್ದ ಬಹಿರಂಗ ಸಭೆಯುನ್ನುದ್ದೇಶಿಸಿ ಹೇಳಿದರು. ಸಿ ಪಿ ಐ (ಎಂ) ರಾಜ್ಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಕಾನೂನನ್ನು ಪಾಲಿಸುವವರೇ ಅದನ್ನು ಭಕ್ಷಿಸಿದಲ್ಲಿ ಜನತೆಯೇ ಕಾನೂನನ್ನು ಕೈಗೆತ್ತಿಕೊಳ್ಳುವಂತಾದೀತೆಂದೂ ಸರಕಾರವನ್ನು ಎಚ್ಚರಿಸಿದರು ಎಂ. ಕೆ.

ಸ್ವಾತಂತ್ರ್ಯ ಹೋರಾಟದಿಂದೀಚೆಗೆ ರೈತರ ಸಮಸ್ಯೆಗಳ ಬಗ್ಗೆ ವಿವರಿಸಿದ ಜಿಲ್ಲಾ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಜನಾರ್ಧನಸ್ವಾಕರು, ಭೂಸುಧಾರಣೆಯ ತುರ್ತು ಜಾರಿಗಾಗಿ ಒತ್ತಾಯಿಸಿದರು. ರೈತರ ಬಲಿಷ್ಟ ಸಂಘಟನೆ ಮತ್ತು ಚಳುವಳಿಗೆ ಕರೆ ಇತ್ತರು. ಜಿಲ್ಲೆಯಾದ್ಯಂತ ರೈತ ಚಳುವಳಿ ಪ್ರಾರಂಭವಾಗುತ್ತಲಿದೆ ಎಂದು ತಿಳಿಸಿದ ಅವರು ಈ ವರ್ಷದ ಕೊನೆಯೊಳಗೆ ಬೆಂಗಳೂರಲ್ಲಿ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಲಾಗುವುದೆಂದರು.

ಸಭೆಯುನ್ನುದ್ದೇಶಿಸಿ ಮಾತನಾಡಿದ ಕಾಂ. ಸೂರ್ಯನಾರಾಯಣಭಟ್ ಅವರು ವಿನಾ ಕಾರಣ ಅಮಾನತ್ತುಗೊಳಿಸಿದ ಮತ್ತು ಈಗ ಸತ್ಯಾಗ್ರಹ ನಡೆಸುತ್ತಲಿರುವ ಪಾಂಟೇಷನ್ ಕಾರ್ಮಿಕರನ್ನು ಕೆಲಸಕ್ಕೆ ಸೇರಿಸಿಕೊಂಡಿಲ್ಲವಾದರೆ ತೀವ್ರವಾದ ಚಳುವಳಿಯನ್ನು ಸಂಘಟಿಸಲಾಗುವುದೆಂದು ಎಚ್ಚರಿಸಿದರು. ಸಭೆಯುನ್ನುದ್ದೇಶಿಸಿ ಕಾಂ. ಬಾಲಕೃಷ್ಣ ಬೈಪ್ಪಡಿತ್ತಾಯ, ಕಾಂ. ಬಿ. ರಾಮಕೃಷ್ಣ ಮತ್ತು ಅಧ್ಯಕ್ಷ ಕಾಂ ರಾಮಯ್ಯಗೌಡರು ಮಾತನಾಡಿದರು. ಕಾಂ. ಮೋನಪ್ಪಗೌಡರು ಸ್ವಾಗತ ಮಾಡಿದ್ದರು. ಕಾಂ. ಬಾಲಕೃಷ್ಣಗೌಡರು ವಂದನಾರ್ಪಣೆ ಮಾಡುವುದರೊಂದಿಗೆ ಸಭೆ ಮುಕ್ತಾಯವಾಯಿತು.

○

ನಗರಸಭೆ ನೌಕರದಾರರು ಹೋರಾಟದ ಕಣಕ್ಕೆ

ಸರಕಾರಿ ನೌಕರದಾರರಿಗೆ ಸಿಗುತ್ತಿರುವ ಎಲ್ಲ ಸೌಲಭ್ಯಗಳನ್ನು ಕರ್ನಾಟಕ ರಾಜ್ಯದ ನಗರಸಭೆ ನೌಕರದಾರರಿಗೂ, ಪೌರಕಾರ್ಮಿಕರಿಗೂ ಒದಗಿಸಬೇಕೆಂಬ ನಿಯಮವಿದ್ದರೂ ಕೂಡ, ಸರಕಾರ ಅದನ್ನು ಪಾಲಿಸದೆ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಸರಕಾರಿ ನೌಕರದಾರರಿಗೆ ಕೊಡಲಾದ 4 ತುಟ್ಟಿ ಭತ್ತೆ, ನಿವೃತ್ತಿ ವೇತನ, ವಾಹತುಕ ಭತ್ತೆಗಳಲ್ಲದೆ, ಪ್ರತ್ಯೇಕ ಡೈರೆಕ್ಟರೇಟ್, ಬಡ್ತಿ, ಎರವಲು ಅಧಿಕಾರಿಗಳ ವಾಪಸಾತಿ ಮುಂತಾದ ಬೇಡಿಕೆಗಳ ಕುರಿತು ಸರಕಾರ ತತ್ವಶಃ ಒಪ್ಪಿಕೊಂಡಿದ್ದರೂ ಕೂಡ ಅವುಗಳ ಕುರಿತು ನಿರ್ಣಯ ಕೈಗೊಳ್ಳುತ್ತಿಲ್ಲ.

ಮಾರ್ಕೆಟಿನಲ್ಲಿ ದೈನಂದಿನ ಬೆಲೆ ಹೆಚ್ಚಾಗುತ್ತಿರುವಾಗ ನಗರಸಭೆ ನೌಕರದಾರರಿಗೆ ತುಟ್ಟಿಭತ್ತೆ ಕೊಡದಿರುವುದರಿಂದ ಅನ್ಯಾಯ ಮಾಡಿದಂತಾಗಿದ್ದು, ಇದನ್ನು ಪರಿಹರಿಸುವುದಾಗಿ ಧರ್ಮಸಿಂಗ ಅವರು ಹೋದ ತಿಂಗಳು ಫೆಡರೇಶನಿನ ಮುಖಂಡರಿಗೆ ಆಶ್ವಾಸನೆ ನೀಡಿದ್ದರು.

ತಾ. 7ರಂದು ಬೆಂಗಳೂರಲ್ಲಿ ಸೇರಿದ ಫೆಡರೇಶನಿನ ಕಾರ್ಯಕಾರಿ ಸಮಿತಿ ಈ ಎಲ್ಲ ವಿಷಯಗಳನ್ನು ಗಮನಿಸಿ ಹೋರಾಟದ ಕಾರ್ಯಕ್ರಮ ನಿರ್ಧರಿಸಿದೆ. ಸೆಪ್ಟೆಂಬರ 25ರಂದು ಎಲ್ಲ ನಗರ ಸಭೆಗಳ ನೌಕರದಾರರು ಬೇಡಿಕೆ ದಿನಾಚರಣೆ ಆಚರಿಸಿ ಮನವಿಗಳನ್ನು ಅರ್ಪಿಸಬೇಕು, ಅಕ್ಟೋಬರ 6ರಂದು ತಂತಮ್ಮ ಕಚೇರಿಗಳಲ್ಲೇ ಬೈಟಕ್ ಮುಷ್ಕರ ಹೂಡಬೇಕೆಂದೂ, ಅಕ್ಟೋಬರ 24ರಂದು ವಿಧಾನ ಸೌಧದ ಮುಂದೆ ಅನ್ನಸತ್ಯಾಗ್ರಹ ಕೈಗೊಳ್ಳಬೇಕೆಂದೂ ನಿರ್ಣಯಿಸಲಾಯಿತು. ಐ.ಐ.ಡಿ. ಸಾಲಪ್ಪ, ಎಂ. ಎಲ್. ಎ. ಅಧ್ಯಕ್ಷತೆ ವಹಿಸಿದ್ದರು. ಎನ್. ಕೆ. ಉಪಾಧ್ಯಾಯ, ಸಿ. ಕೆ. ಮೋನ ಮೊದಲಾದವರು ಸ್ಥಾನಬದ್ಧತಾ ಕಾಯಿದೆ, ಅಕ್ರಮ ಕೆಲಸಗಾರರನ್ನು ತಮ್ಮ ಕ್ಷೇತ್ರ ಬಿಟ್ಟು ಮತ್ತೊಂದು ಜಿಲ್ಲೆಗೆ ಬದ್ಲಿ ಮಾಡುತ್ತಿರುವುದನ್ನು ಖಂಡಿಸಿ ಮಾತಾಡಿದರು.

●

ಚಂದಾ ವಿವರ

ಬಿಡಿಪ್ರತಿ	:	50 ಪೈಸೆ
6 ತಿಂಗಳಿಗೆ	:	13 ರೂ.
ಒಂದು ವರ್ಷಕ್ಕೆ	:	25 ರೂ.

ಜಂಟಿ ಹೋರಾಟಕ್ಕೆ ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ) ಕರೆ

[ಒಂದನೇ ಪುಟದಿಂದ]

ಮತ್ತು ದೇಣಿಗೆಗಳ ಅಹಸ್ಯ ಪದ್ಧತಿಯನ್ನು ರದ್ದುಗೊಳಿಸುವುದು ಮುಂತಾದ ಸಮಸ್ಯೆಗಳು ರಾಜ್ಯದ ವಿದ್ಯಾರ್ಥಿ ಯುವಜನರನ್ನು ಬಾಧಿಸುತ್ತಿವೆ. ಆಡಳಿತದ ಎಲ್ಲಾ ಮಟ್ಟಗಳಲ್ಲೂ ಭ್ರಷ್ಟಚಾರ ವ್ಯಾಪಕವಾಗಿದೆ ಹಾಗೂ ಅದಕ್ಕೆ ಸರ್ಕಾರ ಮತ್ತು ಅದರ ನೀತಿಗಳೇ ಕಾರಣವಾಗಿವೆ. ಕರ್ನಾಟಕ ಸರ್ಕಾರವು ಜನತೆಯ ಸಮಸ್ಯೆಗಳನ್ನು ಪರಿಹರಿಸಲು ತಾನು ಅಸಮರ್ಥವೆಂದು ತೋರಿಸಿಕೊಟ್ಟಿದೆ.

ಕಾಂಗ್ರೆಸ್ (ಐ) ಆಳುತ್ತಿರುವ ರಾಜ್ಯ ಸರ್ಕಾರಗಳು ಜನತೆಯ ಸಮಸ್ಯೆಗಳನ್ನು ಪರಿಹರಿಸಲು ಅಸಮರ್ಥವಾಗಿವೆ. ಇನ್ನೊಂದೆಡೆ ಪಶ್ಚಿಮ ಬಂಗಾಳ-ತ್ರಿಪುರಗಳ ಎಡರಂಗ ಸರ್ಕಾರಗಳು ಹಾಗೂ ಕೇರಳದ ಎಡ-ಪ್ರಜಾತಾಂತ್ರಿಕ ರಂಗದ ಸರ್ಕಾರ–ಇವುಗಳು ಬದಲಿ ಹಾದಿಯೊಂದನ್ನು ತೋರಿಸಿವೆ. ಪ್ರಸ್ತುತ ಚೌಕಟ್ಟಿನೊಳಗೇ ಇವುಗಳು ಹಿಂದುಳಿದ ಹಾಗೂ ಪೀಡಿತ ಜನತೆಗೆ ಪರಿಹಾರ ನೀಡಲು ಸಮರ್ಥವಾಗಿವೆ. ಇದರಿಂದ ಸಮಯಬದ್ಧ ಕಾರ್ಯಕ್ರಮವನ್ನು ಆಧರಿಸಿದ ಒಂದು ಎಡ-ಪ್ರಜಾತಾಂತ್ರಿಕ ಸರ್ಕಾರ ಮಾತ್ರವೇ ದೇಶಕ್ಕೆ ನಿಜವಾದ ಬದಲಿಯಾಗಬಲ್ಲದೆಂಬುದು ಸಾಬೀತಾಗಿದೆ, ಈ ರೀತಿಯ ಎಡ-ಪ್ರಜಾತಾಂತ್ರಿಕ ಬದಲಿಯನ್ನು ಇತರ ಪ್ರಜಾತಾಂತ್ರಿಕ ಶಕ್ತಿಗಳ ಸಹಕಾರದಿಂದ ಕಟ್ಟಲು ಸಿ.ಪಿ.ಐ. ಮತ್ತು ಸಿ.ಪಿ.ಐ (ಎಂ) ಗಳು ಬದ್ಧವಾಗಿವೆ.

ಈ ನಿಟ್ಟಿನಲ್ಲಿ ಸಿ.ಪಿ.ಐ., ಸಿ.ಪಿ.ಐ. (ಎಂ)., ಆರ್. ಎಸ್. ಪಿ., ಫಾರ್ವರ್ಡ್ ಬ್ಲಾಕ್, ಕಾಂಗ್ರೆಸ್ (ಯು) ಮತ್ತು ಲೋಕದಳಗಳು ಜನತೆಯ ತುರ್ತು ಸಮಸ್ಯೆಗಳ ಬಗ್ಗೆ ಜಂಟಿ ಚಳವಳಿ-ಹೋರಾಟಗಳನ್ನು ನಡೆಸಲು ಮುಂಬಂದಿರುವುದನ್ನು ನಾವು ಸ್ವಾಗತಿಸುತ್ತೇವೆ.

ಜನತೆಯ ಎಲ್ಲಾ ವಿಭಾಗಗಳ ಅತೃಪ್ತಿಯು ಒಮ್ಮಿಂದೊಮ್ಮೆಗೇ ಹೋರಾಟಗಳಲ್ಲಿ ವ್ಯಕ್ತವಾಗುತ್ತಿದೆ, ನರಗುಂದ, ನವಲಗುಂದ ಹಾಗೂ ಇತರೆಡೆಗಳ ರೈತರು ದಂಗೆಯೆದ್ದು ರಾಜ್ಯದ ಮರ್ದನ ಯಂತ್ರವನ್ನು ಎದುರಿಸಿದರು. ರಾಜ್ಯದ ಕಾರ್ಮಿಕ ವರ್ಗವು ತನ್ನ ನ್ಯಾಯಯುತ ಬೇಡಿಕೆಗಳಿಗಾಗಿ ಹೆಚ್ಚುಹೆಚ್ಚಾಗಿ ತೀವ್ರ ಹಾಗೂ ದೀರ್ಘಕಾಲದ ಹೋರಾಟಗಳನ್ನು ನಡೆಸುತ್ತಿದೆ. ಅದೇ ರೀತಿ ವಿದ್ಯಾರ್ಥಿಗಳು, ಶಿಕ್ಷಕರೂ ಸಹ ಈ ಹೋರಾಟಗಳನ್ನು ಸೂಕ್ತ ರೀತಿಯಲ್ಲಿ ಮುನ್ನಡೆಸಬೇಕೆಂಬುದು ನಮ್ಮ ಅಭಿಪ್ರಾಯವಾಗಿದೆ.

ಹೀಗೆ ಮಾಡುವುದಕ್ಕಾಗಿ ಕರ್ನಾಟಕದ ಸಿ.ಪಿ.ಐ ಮತ್ತು ಸಿ.ಪಿ.ಐ (ಎಂ) ಗಳು ಕೆಳಕಂಡ ತುರ್ತುಸ್ವರೂಪದ ಬೇಡಿಕೆಗಳಿಗಾಗಿ ರಾಜ್ಯಾದ್ಯಂತ ಚಳವಳಿ-ಹೋರಾಟಗಳನ್ನು ನಡೆಸಲು ನಿರ್ಧರಿಸಿವೆ:–

1. ಅಗತ್ಯವಸ್ತುಗಳ ಬೆಲೆಗಳನ್ನು ಜನತೆಯು ಕೊಳ್ಳಲು ಸಾಧ್ಯವಾಗುವಂಥ ಮಟ್ಟಕ್ಕೆ ಇಳಿಸಬೇಕು.

2. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಿ ಗ್ರಾಮ ಪ್ರದೇಶಗಳಿಗೆ ವಿಸ್ತರಿಸಬೇಕು. ಅದು ಆಹಾರಧಾನ್ಯಗಳು, ಸಕ್ಕರೆ, ಖಾದ್ಯ ತೈಲಗಳು, ಬಟ್ಟೆ, ಸೀಮೆಎಣ್ಣೆ ಮತ್ತು ಅಗತ್ಯ ಔಷಧಿಗಳನ್ನು ಮಾರಾಟ ಮಾಡಬೇಕು. ಇದಕ್ಕೆ ಅಗತ್ಯವಾದ ದಾಸ್ತಾನನ್ನು ಸರ್ಕಾರವು ಕೊಳ್ಳಬೇಕು.

3. ಭೂಸ-ಧಾರಣೆಗಳು ಪರಿಣಾಮಕಾರಿಯಾಗಿ ಜಾರಿಯಾಗಬೇಕು ಹಾಗೂ ಮಿಗಿತೆ ಭೂಮಿಯನ್ನು ಭೂಹೀನರಿಗೆ ಹಂಚಬೇಕು. ಕೃಷಿ ಕಾರ್ಮಿಕರಿಗೆ ದಿನಕ್ಕೆ 10ರೂ. ಕನಿಷ್ಠ ಕೂಲಿ ಕೊಡಬೇಕು ಹಾಗೂ ಅವರ ಸೇವಾ ಪರಿಸ್ಥಿತಿಯ ಬಗ್ಗೆ ಕಾನೂನು ತರಬೇಕು. ಉತ್ತರ ಕರ್ನಾಟಕದ ರೈತರೂ ಸೇರಿದಂತೆ ರಾಜ್ಯದ ರೈತರ ಬೇಡಿಕೆಗಳಿಗೆ ಬೆಂಬಲಕೊಡಬೇಕು.

4. ಕಬ್ಬು, ಜೋಳ, ಹತ್ತಿ, ಭತ್ತ, ಇತ್ಯಾದಿ ರೈತರ ಬೆಳೆಗಳಿಗೆ ಪ್ರತಿಫಲದಾಯಕ ಬೆಲೆಗಳನ್ನು ಸರ್ಕಾರವು ಗೊತ್ತುಮಾಡಿ, ಅವುಗಳನ್ನು ರೈತರಿಂದ ಕೊಂಡು ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಣೆ ಮಾಡಬೇಕು.

5. ಕರ್ನಾಟಕ ಅಗತ್ಯ ಸೇವೆಗಳ ನಿರ್ವಹಣಾ ಮಸೂದೆಯನ್ನು ಹಿಂತೆಗೆಯಬೇಕು ಹಾಗೂ ಸ್ಥಾನಬದ್ಧತಾ ಸುಗ್ರೀವಾಜ್ಞೆಯನ್ನು ತರುವ ಯೋಜನೆಯನ್ನು ಕೈಬಿಡಬೇಕು.

6. ಔದ್ಯಮಿಕ ವಿವಾದಗಳಲ್ಲಿ ಪೋಲೀಸ್ ಹಸ್ತಕ್ಷೇಪ ಹಾಗೂ ಇತರ ಎಲ್ಲಾ ವಿಧದ ಪೋಲೀಸ್ ದಬ್ಬಾಳಿಕೆ-ಕಿರುಕುಳಗಳನ್ನು ಅಂತ್ಯಗೊಳಿಸಬೇಕು.

7. ಹೊಸಪೇಟೆಯಲ್ಲಿ ವಿಜಯನಗರ ಉಕ್ಕು ಕಾರ್ಖಾನೆಯನ್ನು ಸ್ಥಾಪಿಸಬೇಕು ಹಾಗೂ ಇದಕ್ಕಾಗಿ ಸಾಕಷ್ಟು ಹಣವನ್ನು ಮೀಸಲಾಗಿಡಬೇಕು.

8. ಗ್ರಾಮೀಣ ಮತ್ತು ನಗರ ನಿರುದ್ಯೋಗಿಗಳಿಗೆ ಉದ್ಯೋಗದ ಭರವಸೆ; ಪರಿಸ್ಥಿತಿಗೆ ಅನುಗುಣವಾಗಿ, ಕೇರಳ ಮತ್ತು ಪಶ್ಚಿಮ ಬಂಗಾಳಗಳ ಯೋಜನೆಗಳ ಆಧಾರದ ಮೇಲೆ ನಿರುದ್ಯೋಗಿಗಳಿಗೆ ಪರಿಹಾರ ಒದಗಿಸುವುದು.

ಜನತೆಯ ಹಿತಗಳನ್ನು ರಕ್ಷಿಸುವುದೇ ಗುರಿಯಾಗಿರುವ ಈ ಚಳವಳಿಗೆ ರಾಜ್ಯದ ಜನತೆ ಮತ್ತು ಪ್ರಜಾತಾಂತ್ರಿಕ ಶಕ್ತಿಗಳು ಬೆಂಬಲನೀಡಿ ಎಲ್ಲಾ ರೀತಿಯ ಸಹಾಯ ಮಾಡಬೇಕೆಂದು ಕರ್ನಾಟಕದ ಸಿ ಪಿ ಐ ರಾಜ್ಯಮಂಡಳಿ ಕಾರ್ಯದರ್ಶಿ ಕಾಂ. ಎಂ. ಎಸ್ ಕೃಷ್ಣನ್ ಮತ್ತು ಸಿ. ಪಿ ಐ (ಎಂ) ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಕರೆ ಇತ್ತಿದ್ದಾರೆ. ರಾಜ್ಯಮಟ್ಟದಲ್ಲಿ ಈ ಎರಡು ಪಕ್ಷಗಳ ಮತ್ತು ಗೆಳೆಯ ಪಕ್ಷಗಳ ಸಮಾವೇಶವೊಂದನ್ನು ಶೀಘ್ರವೇ ನಡೆಸುವುದಾಗಿಯೂ ಇವರುಗಳು ಹೇಳಿದ್ದಾರೆ.

○

ಸಂಪಾದಕೀಯ

[ಒಂದನೇ ಪುಟದಿಂದ]

ಹಾಗೂ ಕೋಮುಶಕ್ತಿಗಳನ್ನು ವಿರೋಧಿಸುವುದು ಈ ಕೂಟದ ಉದ್ದೇಶವಾಗಿದೆ. ವಿಶಾಲ ತಳಹದಿಯ ಐಕ್ಯತೆಯನ್ನು ಬೆಳೆಸಿ, ಹೋರಾಡುವುದರ ಮೂಲಕ ಒಂದು ಎಡ ಪ್ರಜಾಸತ್ತಾತ್ಮಕ ಬದಲಿಯನ್ನು ಕಟ್ಟುವುದು ಸಾಧ್ಯವಾಗಬಹುದು. ಆರು ಪಕ್ಷಗಳು ಸೆ. 28ರಂದು ನವದೆಹಲಿಯಲ್ಲಿ ರಾಷ್ಟ್ರೀಯ ಮಟ್ಟದ ಸಮಾವೇಶ ನಡೆಸಲು ನಿರ್ಣಯಿಸಿವೆ. ಹೀಗೆಯೇ ರಾಜ್ಯಮಟ್ಟದಲ್ಲೂ, ಎಲ್ಲಾ ರಾಜ್ಯಗಳಲ್ಲಿ ಐಕ್ಯತೆ, ಸಮಾವೇಶ. ಹೋರಾಟದ ಕಾರ್ಯಕ್ರಮಗಳನ್ನು ಹಾಕಲು ಮುಂದಾಗಬೇಕು. ಈಗಾಗಲೇ ಕರ್ನಾಟಕದಲ್ಲಿ ಸಿ. ಪಿ. ಐ. (ಎಂ) ಮತ್ತು ಸಿ. ಪಿ ಐ. ಪಕ್ಷಗಳು ಈ ಬಗ್ಗೆ ಮುತುವರ್ಜಿ ವಹಿಸಿರುವುದು ಸ್ವಾಗತಾರ್ಹ. ○

ಬಾಗೇಪಲ್ಲಿಯಲ್ಲಿ ಪೋಲೀಸ್ ಅತಿರೇಕ

[ಒಂದನೇ ಪುಟದಿಂದ]

ಸಂಘವು ಸಕ್ರಿಯವಾಗಿ ಭಾಗವಹಿಸಿವೆ. ಭಾಗೇಪಲ್ಲಿಯಲ್ಲಿ ಪೋಲೀಸರ ದೌರ್ಜನ್ಯವನ್ನು ಖಂಡಿಸಿ ಈಗಾಗಲೇ ಕೋಲಾರ ಜಿಲ್ಲೆಯ ಬೇರೆಬೇರೆ ಎಡೆಗಳಲ್ಲಿ ಸಿ. ಪಿ ಐ (ಎಂ) ಮತ್ತು ರೈತಸಂಘಗಳು ಪ್ರತಿಭಟಿಸಿವೆ. ಸೆಪ್ಟೆಂಬರ 7ರಂದು ಮುಳಬ್ಬಾಗಿಲಿನಲ್ಲಿ ಪಕ್ಷದ ಜಿಲ್ಲಾ ಸಮಿತಿಯ ಸಭೆ ನಡೆದು, ಬಾಗೇಪಲ್ಲಿಯಲ್ಲಿ ಪೋಲೀಸರು ನಡೆಸುತ್ತಿರುವ ದೌರ್ಜನ್ಯವನ್ನು ಪ್ರತಿಭಟಿಸಲು ಜಿಲ್ಲೆಯಾದ್ಯಂತ ತಾಲ್ಲೂಕು ಕೇಂದ್ರಗಳಲ್ಲೂ ಹಳ್ಳಿಗಳಲ್ಲೂ ಬಹಿರಂಗ ಸಭೆ ನಡೆಸಿ. ಸಹಿಸಂಗ್ರಹಿಸಿ ರಾಜ್ಯದ ಮುಖ್ಯಮಂತ್ರಿಯವರಿಗೂ, ಗೃಹಖಾತೆ ಕಾರ್ಯದರ್ಶಿಗೂ ಮನವಿಕೊಡಲು ತೀರ್ಮಾನಿಸಲಾಯ್ತು. ಸೆಪ್ಟೆಂಬರ 28ರಂದು ಕೋಲಾರದಲ್ಲಿ ಎಲ್ಲಾ ವಿರೋಧ ಪಕ್ಷಗಳ ಕಾರ್ಯಕರ್ತರು ಮತ್ತು ಮುಖಂಡರುಗಳ ಸಭೆಸೇರಿಸಿ, ಅಲ್ಲಿ ಚರ್ಚಿಸಿ, ಎಲ್ಲಾ ವಿರೋಧ ಪಕ್ಷಗಳು ಜಂಟಿಯಾಗಿ ತೀವ್ರ ಚಳುವಳಿ ನಡೆಸಬೇಕೆಂದೂ ತೀರ್ಮಾನ ಮಾಡಲಾಯ್ತು. ಪಕ್ಷದ ಜಿಲ್ಲಾ ಸಮಿತಿ ಸಭೆಗೆ ಕಾಂ ಅಪ್ಪಸ್ವಾಮಿ ರೆಡ್ಡಿಯವರು ಬಂದಿದ್ದರು.

ಬಾಗೇಪಲ್ಲಿಯಲ್ಲಿ ಪೋಲೀಸ್ ಅತಿರೇಕವನ್ನು ತಕ್ಷಣ ನಿಲ್ಲಿಸುವಂತೆಯೂ ಅಲ್ಲಿಯ ಸರ್ಕಲ್ ಇನ್ಸ್‌ಪೆಕ್ಟರ್ ಅವರನ್ನು ವರ್ಗಾಯಿಸುವುದು ಮತ್ತು ಅಮಾನತುಗೊಳಿಸಬೇಕೆಂದೂ ಸಿ. ಪಿ. ಐ. (ಎಂ.) ರಾಜ್ಯ ಸಮಿತಿ ಕಾರ್ಯದರ್ಶಿಯವರು ಸರಕಾರವನ್ನು ಒತ್ತಾಯಿಸಿದ್ದಾರೆ. ಬಾಗೇಪಲ್ಲಿಯಲ್ಲಿ ಪೋಲೀಸರ ಹದ್ದು ಮೀರಿದ ವರ್ತನೆಯನ್ನು ನಿಲ್ಲಿಸದಿದ್ದರೆ ರಾಜ್ಯವ್ಯಾಪಿಯಾಗಿ ತೀವ್ರ ಚಳುವಳಿ ನಡೆಸಬೇಕಾಗುವುದೆಂದೂ ಸರಕಾರವನ್ನು ಇವರು ಎಚ್ಚರಿಸಿದ್ದಾರೆ. ●

ಸುಳ್ಯ ಎಸ್.ಎಫ್.ಐ. ಯಿಂದ ಸಚಿವರಿಗೆ ಮನವಿ

ದ. ಕ. ಜಿಲ್ಲಾ ಸುಳ್ಯ ತಾಲ್ಲೂಕು ಎಸ್. ಎಫ್. ಐ. ಅಧ್ಯಕ್ಷ ಕಾಂ. ಕೆ. ನಾರಾಯಣ ಮತ್ತು ಕಾರ್ಯದರ್ಶಿ ಕಾಂ. ಕೆ. ರಾಜಗೋಪಾಲ್ ರವರು ಇತ್ತೀಚೆಗೆ ರಾಜ್ಯದ ಪಂಚಾಯತ್ ರಾಜ್ಯ ಮಂತ್ರಿ ಬೇಗಾನೆ ರಾಮಯ್ಯನವರಿಗೆ ತಾಲ್ಲೂಕು ವಿದ್ಯಾರ್ಥಿಗಳ ಪರವಾಗಿ ಒಂದು ಮನವಿಯನ್ನು ಕೊಟ್ಟಿರುವರು. ತಾಲ್ಲೂಕಿನ ಶಾಲೆ ಮತ್ತು ಕಾಲೇಜುಗಳಲ್ಲಿ ಪಾಠ ಹೇಳಿಕೊಡಲು ಸಾಕಷ್ಟು ಅಧ್ಯಾಪಕರುಗಳ ನೇಮಕವಾಗದೆ (ಸ್ಥಾನಗಳು ಖಾಲಿ ಇದ್ದರೂ) ಇರುವುದರಿಂದ ವಿದ್ಯಾರ್ಥಿಗಳಿಗಾಗುವ ಕಷ್ಟವನ್ನು ಮನವಿಯಲ್ಲಿ ತೋಡಿಕೊಳ್ಳಲಾಗಿದೆ. ಸುಳ್ಯ ಸರಕಾರಿ ಕಾಲೇಜಿನಲ್ಲಿ ಇಂಗ್ಲೀಷ್, ಸಂಸ್ಕೃತ ಪ್ರಾಧ್ಯಾಪಕರುಗಳು, ಹೈಸ್ಕೂಲಿನಲ್ಲಿ ಕನ್ನಡ ಪ್ರಾಧ್ಯಾಪಕರುಗಳ ನೇಮಕವಾಗಿಲ್ಲ; ಅಜ್ಜಾವರ ಹೈಸ್ಕೂಲಿನಲ್ಲಿ ಎರಡೇ ಮಂದಿ ಉಪಾಧ್ಯಾಯರುಗಳಿರುವರು. ಈ ಪರಿಸ್ಥಿತಿಯನ್ನು ಕೂಡಲೇ ಹೋಗಲಾಡಿಸಲು ಸರಕಾರ ವಿಫಲವಾದಲ್ಲಿ ಚಳುವಳಿಯ ಹೊರತು ಅನ್ಯಮಾರ್ಗವಿಲ್ಲವೆಂದೂ ವಿದ್ಯಾರ್ಥಿ ಮುಂದಾಳುಗಳು ಎಚ್ಚರಿಸಿರುವರು.



"ಬಿಜಾಪುರದಲ್ಲಿ ಸೆ 1ರಂದು ನಡೆದ ರೈತ ಪ್ರತಿಭಟನೆಯ ದೃಶ್ಯ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT